
# ಶ್ರೀ ಶ್ರೀ ಪ್ರೇಮಧಾಮದೇವಸ್ತೋತ್ರ

## ಹೊಂಬಣ್ಣದ ದೇವನ ಚಿನ್ನದ ಉಡುಗೊರೆ




ಸ್ವಾಮಿ ಭಕ್ತಿರಕ್ಷಕ ಶ್ರೀಧರ


# ಶ್ರೀ ಶ್ರೀ ಪ್ರೇಮಧಾಮದೇವ ಸ್ತೋತ್ರ

## ಹೊಂಬಣ್ಣದ ದೇವನ ಚಿನ್ನದ ಉಡುಗೊರೆ


ಸ್ವಾಮಿ ಭಕ್ತಿರಕ್ಷಕ ಶ್ರೀಧರ



ಶ್ರೀಲ ಭಕ್ತಿಗೌರವ ನರಸಿಂಹ ಮಹಾರಾಜ



ಶ್ರೀಲ ಭಕ್ತಿರಕ್ಷಕ ಶ್ರೀಧರದೇವ ಗೋಸ್ವಾಮಿ ಮಹಾರಾಜ




ಪಂಚಮಪುರುಷಾರ್ಥವಾದ ಕೃಷ್ಣಪ್ರೇಮವನ್ನು ಹೊಂದುವುದಕ್ಕೆ ದಾರಿತೋರುವ ಶ್ರೀಕೃಷ್ಣನ ದಿವ್ಯನಾಮಗಳ ಮುಕ್ತ ವಿತರಣೆಯನ್ನು ಚುರುಕುಗೊಳಿಸುವ ಸಲುವಾಗಿ ಅವನು ತನ್ನನ್ನು ತಾನು ಪಂಚತತ್ತ್ವವೆಂಬ ಐದುವಿಧದ ಶಕ್ತಿಗಳಾಗಿ ವಿಸ್ತರಿಸಿಕೊಂಡ. ತನ್ನ ದಿವ್ಯ ಅಂಗಗಳಿಂದ ಮತ್ತು ದಿವ್ಯ ಶಸ್ತ್ರಗಳಿಂದ ಸಂಪೂರ್ಣ ಸಜ್ಜಿತನಾಗಿ ತನ್ನ ಸಂಗಡಿಗರೊಡಗೂಡಿ ತನ್ನ ಸಕಲ ಐಶ್ವರ್ಯಗಳೊಂದಿಗೆ ಅವನು ಈ ಧರೆಯಲ್ಲಿ ಅವತರಿಸಿದ. ಪರಮಪುರುಷ ಸ್ವಯಮ್ ಶ್ಯಾಮಸುಂದರನಾಗಿರುವ ಅವನು ಒಬ್ಬ ಸಾಮಾನ್ಯ ನಾಗರಿಕನಂತೆ ನದಿಯಾ ಗ್ರಾಮದ ಬೀದಿಗಳಲ್ಲಿ ಶ್ರೀಕೃಷ್ಣನ ದಿವ್ಯನಾಮಗಳನ್ನು ಆನಂದಾತಿಶಯದಿಂದ ಹಾಡುತ್ತಾ, ನರ್ತಿಸುತ್ತಾ ಗೌರಸುಂದರನಾಗಿ ಕಾಣಿಸಿಕೊಂಡ. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

# ಪರಿಚಯ

ಹದಿನೈದನೇ ಶತಮಾನದಲ್ಲಿ ಪಶ್ಚಿಮಬಂಗಾಳದ ನದಿಯಾ ಗ್ರಾಮದಲ್ಲಿ ಒಬ್ಬ ದೈವೀ ಪುರುಷನ ಉದಯವಾಯಿತು. ಅವನ ಹೆಸರು ಶ್ರೀಚೈತನ್ಯ ಎಂದಾಗಿತ್ತು. ಅವನು ಅತ್ಯಂತ ಸುಂದರಲಕ್ಷಣಗಳನ್ನು ಮತ್ತು ಅಸ್ವಾಭಾವಿಕವಾದ ಹೊಂಬಣ್ಣದ ದೇಹವನ್ನು ಹೊಂದಿದ್ದನು. ಅವನ ಭಕ್ತರಲ್ಲಿ ಬಹಳಜನ ಅವನನ್ನು ಅಕ್ಕರೆಯಿಂದ ಗೌರಸುಂದರ(ಹೊಂಬಣ್ಣದ ಸುಂದರ) ಮತ್ತು ಗೌರಾಂಗ(ಹೊಂಬಣ್ಣದ ದೇಹದವನು) ಎಂದು ಕರೆಯುತ್ತಿದ್ದರು. ಅವನ ಹೃದಯವು ಪರಾತ್ಪರ ದಿವ್ಯಸತ್ಯ – ಶ್ರೀಕೃಷ್ಣನ ಪ್ರೇಮಪೂರ್ವಕ ಭಕ್ತಿಯಿಂದ ಮತ್ತು ಎಲ್ಲಾ ಜೀವಾತ್ಮರ ಮೇಲೆ ಕರುಣೆಯಿಂದ ತುಂಬಿತ್ತು. ಅವನ ಸಂಪರ್ಕಕ್ಕೆ ಬಂದ ಎಲ್ಲಾ ಧರ್ಮಾತ್ಮರು ಅವನನ್ನು ಅತ್ಯಂತ ಪ್ರೀತಿಯಿಂದ ಆದರಿಸುತ್ತಿದ್ದರು. ಸಾಕ್ಷಾತ್ಕಾರದ ಮೂಲಕ ಅವರು ಅವನನ್ನು ಪರಮ ಪವಿತ್ರ ಸತ್ಯದ ಅವತಾರ ಮತ್ತು ಪರಮ ಪ್ರೇಮಾನಂದದ ಮೂರ್ತರೂಪ ಎಂದು ನಂಬಿದರು. ಅವನು ಪ್ರಕಟನಾಗಿದ್ದ ಕಾಲದಲ್ಲಿ ಮತ್ತು ನಂತರ ಅವನ ಕೆಲವು ಶುದ್ಧಭಕ್ತರು ಅವನಬಗ್ಗೆ ಅಪಾರ ಪ್ರೇಮವನ್ನು ಮತ್ತು ಪ್ರಶಂಸೆಗಳನ್ನು ವ್ಯಕ್ತಪಡಿಸುವ ಹಲವು ಭಕ್ತಿಗೀತೆಗಳನ್ನು ರಚಿಸಿದರು. ಈ ಪ್ರೇಮಧಾಮದೇವ ಸ್ತೋತ್ರವು ಅವುಗಳಲ್ಲೊಂದಾಗಿದೆ. ಗೌರಲೀಲೆಯ ಅತ್ಯಮೂಲ್ಯ ಅಪೂರ್ವ ನಿಧಿಯಾದ ಈ ರಚನೆಯು ಇದರ ರಚನಕಾರರ ಸ್ವಯಂ ಹೃದಯಾಂತರಾಳದಿಂದ ವ್ಯಕ್ತಗೊಂಡ ಗೌರಪ್ರೇಮದ ಸ್ವಭಾವಜನ್ಯ ಸೌಂದರ್ಯದಿಂದ ಸಚೇತನಗೊಂಡಿದೆ. ಅತ್ಯಂತ ಪ್ರೀತಿಯಿಂದ ಶ್ರೀಚೈತನ್ಯರನ್ನು ಪ್ರೇಮಧಾಮದೇವ(ದಿವ್ಯಪ್ರೇಮದ ಅಪರಿಮಿತ ಧಾಮದ ಒಡೆಯ) ಎಂದು ಸಂಬೋಧಿಸುತ್ತಾ ಅವರು ಅವನ ದಿವ್ಯ ಜೀವನ ಮತ್ತು ಬೋಧನೆಗಳನ್ನು ತಮ್ಮ ಆಲಂಕಾರಿಕ ಭಾಷೆಯಲ್ಲಿ ಸುಂದರವಾಗಿ ವರ್ಣಿಸಿದ್ದಾರೆ.

ಭಕ್ತಿಯ ಸಾಕ್ಷಾತ್ಕಾರದ ಉನ್ನತ ಹಂತಗಳಲ್ಲಿ, ಪ್ರೇಮಪೂರ್ವಕವಾಗಿ ಪೂಜಿಸಲ್ಪಡುವ ದಿವ್ಯ ವ್ಯಕ್ತಿತ್ವದ ಕ್ರಿಯೆಗಳು ಅಥವಾ ಲೀಲೆಗಳು ಶುದ್ಧಭಕ್ತರಿಂದ ಅತ್ಯಂತ ವಿಶಿಷ್ಟವಾದ ರೀತಿಯಲ್ಲಿ ಅರ್ಥೈಸಿಕೊಳ್ಳಲ್ಪಡುತ್ತವೆ. ಅವರ ಶುದ್ಧ ಸಮರ್ಪಣಾ ಮನೋಭಾವ ಮತ್ತು ಅಚಲಪ್ರೇಮದ ಪ್ರಭಾವದಿಂದ ಅವರು ಶಾಶ್ವತ ನೆಲೆಯಲ್ಲಿ ನಿರಂತರವಾಗಿ ಪ್ರದರ್ಶಿಸಲ್ಪಡುವ(ನಿತ್ಯ ಲೀಲೆ)ಅಥವಾ ಮೇಲ್ನೋಟಕ್ಕೆ ಸಾಮಾನ್ಯವೆಂಬಂತೆ ಕಂಡುಬರುವ ಚಟುವಟಿಕೆಗಳನ್ನೊಳಗೊಂಡ ಭೌತಿಕನೆಲೆಯಲ್ಲಿ ಪ್ರದರ್ಶಿಲ್ಪಡುವ(ಭೌಮಲೀಲೆ) ಗೌರಲೀಲೆಗಳ ಅಲೌಕಿಕ ಸ್ವಭಾವಗಳನ್ನು ಅನುಭವಿಸಲು ಶಕ್ತರಾಗಿರುತ್ತಾರೆ. ಈ ದಿವ್ಯ ಕೃತಿಯು ಇದಕ್ಕೊಂದು ಸ್ಪಷ್ಟ ಉದಾಹರಣೆಯಾಗಿರುತ್ತದೆ. ತಮ್ಮ ಗುರುಗಳಾದ ಶ್ರೀಲ ಭಕ್ತಿಸಿದ್ಧಾಂತ ಸರಸ್ವತಿ ಠಾಕೂರ ಪ್ರಭುಪಾದರಿಂದ ತೀವ್ರವಾಗಿ ಪ್ರಭಾವಿತರಾದ ಈ ಲೇಖಕರು ಗೌರಲೀಲೆಯ ಅಮೃತದ ಮಹಾಸಾಗರದೊಳಕ್ಕೆ ಧುಮುಕಿ ಕ್ಷಣಮಾತ್ರದಲ್ಲಿ ಅದರ ಸವಿ ಮತ್ತು ಸೌಂದರ್ಯವನ್ನು ಅನುಭವಿಸಿದರು. ಶ್ರೀ ರೂಪ ಗೋಸ್ವಾಮಿ, ಶ್ರೀ ರಘುನಾಥ ಗೋಸ್ವಾಮಿ ಮತ್ತು ಶ್ರೀ ಕವಿರಾಜ ಗೋಸ್ವಾಮಿಯವರಂಥ ಶುದ್ಧಭಕ್ತರು ಪ್ರಕಟಪಡಿಸಿದ ಪರಮ ಪ್ರೇಮಾನಂದದ ಜಗತ್ತನ್ನು ಆವಿಷ್ಕರಿಸಿದ ಅವರು ಉಕ್ಕಿ ಬರುವ ಗೌರಪ್ರೇಮದ ಅದ್ಭುತ ಅಲೆಗಳನ್ನು ತಮ್ಮ ಆಂತರಿಕ ಬದುಕಿನುದ್ದಕ್ಕೂ ಅನುಭವಿಸುತ್ತಿದ್ದಹಾಗೆ ಈ ಶುದ್ಧಭಕ್ತರಿಂದ ಆಳವಾಗಿ ಪ್ರಭಾವಿತರಾಗಿರುವ ಮತ್ತು

ಆಕರ್ಷಿತರಾಗಿರುವ ಭಾವವನ್ನು ಅನುಭವಿಸದೇ ಇರದಾದರು. ಗೌರಾಂಗನ ಮೇಲಿನ ತಮ್ಮ ಅತಿಯಾದ ಪ್ರೇಮವನ್ನು ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸಲು ಅತ್ಯಂತ ಕಾತುರರಾಗಿದ್ದ ಅವರು ಕ್ರಮೇಣ ತಮ್ಮ ಮೆಚ್ಚಿನ ಆರಾಧ್ಯದೇವನಾದ ಗೌರಾಂಗನನ್ನು ಶ್ಲಾಘಿಸುವ ಶ್ಲೋಕಗಳ ಸರಣಿಯನ್ನು ರಚಿಸತೊಡಗಿದರು. ಕಾಲಕ್ರಮದಲ್ಲಿ ಈ ಸುಂದರ ಸ್ತೋತ್ರದ ಮುಕ್ತಾಯದೊಂದಿಗೆ ಅವರ ಅಭಿಲಾಷೆಯು ನೆರವೇರಿತು.

ಈ ಸ್ತೋತ್ರವು ಚೈತನ್ಯ ಚರಿತಾಮೃತ ಮತ್ತು ಶ್ರೀಗೌರಾಂಗನ ಬಗ್ಗೆ ಇರುವ ಇತರ ಅಧಿಕೃತ ಗ್ರಂಥಗಳನ್ನು ಆಧರಿಸಿದೆ. ಇದು ಅವನನ್ನು ತನ್ನ ಹ್ಲಾದಿನಿ(ತನಗೆ ಸುಖಾನುಭವವನ್ನು ನೀಡುವ ತನ್ನ ಅಂತಃ)ಶಕ್ತಿಯಾದ ಶ್ರೀ ರಾಧಿಕೆಯ ಭಾವವನ್ನು ಮತ್ತು ಅವಳ ಮೈಕಾಂತಿಯನ್ನು  ತುಂಬಿಕೊಂಡ ಪರಾತ್ಪರ ಪರಮಸತ್ಯ ಶ್ರೀಕೃಷ್ಣನೆಂದು ವರ್ಣಿಸುತ್ತದೆ. ಇದು ಶ್ರಿ ಗೌರಾಂಗನನ್ನು ಶ್ರೀ ರಾಧಿಕೆಯು ಅನುಭವಿಸಿದ ಶ್ರೀಕೃಷ್ಣನ ಪರಮ ಪ್ರೇಮಾನಂದದ ಅಗಾಧಸಾಗರದ ಮೂರ್ತರೂಪವೆಂದು ಬಣ್ಣಿಸುತ್ತದೆ. ಆ ಕೃಷ್ಣಪ್ರೇಮವನ್ನು ತನ್ನ ಭಕ್ತರಿಗೆ ಉದಾರವಾಗಿ ದಾನಮಾಡಿದ ಅವನು ಎಂತಹ ಕರುಣಾಳು ಲೋಕಹಿತಾಕಾಂಕ್ಷಿ ಎಂದು ಕೂಡಾ ಈ ಸ್ತೋತ್ರವು ಅವನನ್ನು ವರ್ಣಿಸುತ್ತದೆ.

ಈ ಸ್ತೋತ್ರವು ಅವನ ಜೀವನದ ಪ್ರಮುಖ ಚಟುವಟಿಕೆಗಳನ್ನು, ಅವನ ಸದ್ಗುಣ ಸನ್ನಡತೆಗಳನ್ನು, ವಿಶಿಷ್ಟಲಕ್ಷಣಗಳನ್ನು ಮತ್ತು ನಿರ್ಣಾಯಕ ಸಿದ್ಧಾಂತಗಳನ್ನು ಸಂಕ್ಷಿಪ್ತವಾಗಿ, ಆದರೆ, ಎಲ್ಲಾ ವಿಷಯಗಳೂ ಅದರಲ್ಲಿ ಹಾಸುಹೊಕ್ಕಾಗಿರುವಂತೆ ಸುಂದರವಾಗಿ ನೇಯ್ದು ಪ್ರಸ್ತುತ ಪಡಿಸಿದ್ದಾರೆ. ಅವನು ಅವತರಿಸುವಂತೆ ಆಹ್ವಾನವಿತ್ತ ಶ್ರೀಲ ಅದ್ವೈತ ಆಚಾರ್ಯರ ಶ್ರದ್ಧಾಪೂರ್ಣ ಪ್ರಾರ್ಥನೆ, ಅವನ ಪವಿತ್ರ ಜನನ, ಅವನ ಸುಂದರ ರೂಪ, ಅವನ ವಿನೋದಮಯ ಬಾಲ್ಯ, ಅವನ ಶೈಕ್ಷಣಿಕ ಲೀಲೆಗಳು, ಯಾರಿಂದಲೂ ಜಯಿಸಲಾಗದ ಅತ್ಯಂತ ಜಟಿಲ ತಾರ್ಕಿಕ ವಾದಗಳನ್ನು ತಾನೇ ಹುಟ್ಟುಹಾಕಿ ಮತ್ತೆ ತಾನೇ ಅವುಗಳಿಗೆ ಸಮರ್ಪಕವಾದ ಉಪಸಂಹಾರಗಳನ್ನು ನೀಡುವ ಅವನ ಅಜೇಯ ಪ್ರಾವೀಣ್ಯತೆ, ಸರಿಸಾಟಿಯಿಲ್ಲದ ಅವನ ವಿದ್ವತ್ತು ಮತ್ತು ವಿಶಿಷ್ಟ ದಿವ್ಯಜ್ಞಾನ, ಶ್ರೀಕೃಷ್ಣನ ದಿವ್ಯನಾಮಗಳ ಕೀರ್ತನೆಯ ಮೂಲಕ ವ್ಯಕ್ತವಾದ ಅವನ ಕೃಷ್ಣಪ್ರೇಮ, ಅವನ ಸಂನ್ಯಾಸ ಲೀಲೆ, ಶ್ರೀ ರೂಪ ಗೋಸ್ವಾಮಿ ಮತ್ತು ಶ್ರೀ ಸನಾತನ ಗೋಸ್ವಾಮಿಯವರಿಗೆ ಅವನು ನೀಡಿದ ಬೋಧನೆಗಳು, ಅವನದಕ್ಷಿಣಭಾರತ ಯಾತ್ರೆ, ರಾಮಾನಂದರಾಯನೊಂದಿಗಿನ ಅವನ ಅರ್ಥಪೂರ್ಣ ಸಂಭಾಷಣೆ ಮತ್ತು ರಸರಾಜ ಮತ್ತು ಮಹಾಭಾವವಾಗಿ ತನ್ನ ಸ್ವರೂಪದ ಪ್ರಕಟಣೆ, ಮಾಯಾವಾದ ಸಿದ್ಧಾಂತವನ್ನು ಸೋಲಿಸಿ ಅಚಿಂತ್ಯ ಭೇದಾಭೇದ ಸಿದ್ಧಾಂತವನ್ನು ಸ್ಥಾಪಿಸಿದ ಅವನ ಶಕ್ತಿ, ವೃಂದಾವನಕ್ಕೆ ಹೋಗುವ ಮಾರ್ಗದಲ್ಲಿ ಝಾಡಖಂಡದ ಕಾನನದುದ್ದಕ್ಕೂ ಅವನ ಪ್ರಯಾಣ, ವ್ರಜಧಾಮದ ವಿವಿಧಪ್ರದೇಶಗಳಲ್ಲಿ ಅವನ ವಿಸ್ಮಯಪೂರ್ಣ ವಿಹಾರಗಳು, ಶಿಕ್ಷಾಷ್ಟಕದ ವಿದ್ವತ್ಪೂರ್ಣ ಪ್ರಕಟಣೆ, ತನ್ನ ಅತ್ಯಂತ ನಿಕಟ ಸಂಗಡಿಗರಾದ ಸ್ವರೂಪ ದಾಮೋದರ ಮತ್ತು ರಾಮಾನಂದರಾಯರೊಂದಿಗೆ ನೀಲಾಚಲದಲ್ಲಿ ಅವನ ರಸಾಸ್ವಾದನ(ಶ್ರೀಕೃಷ್ಣನಿಂದ ಅಗಲಿಕೆಯ ನೋವಿನಲ್ಲಿರಾಧಿಕೆಯು ಅನುಭವಿಸಿದ ವಿಪ್ರಲಂಭ ಪ್ರೇಮರಸದ ಆಸ್ವಾದನೆಯಲ್ಲಿ ತನ್ಮಯತೆಯ)ಲೀಲೆ, ಕೃಷ್ಣಪ್ರೇಮದ ಮಧುರ ವೇದನೆಯ ಹುಚ್ಚುಅಲೆಗಳಮೇಲೆ ಸವಾರನಾಗಿ ಕಡಲತೀರದುದ್ದಕ್ಕೂ ಅವನ ಸುತ್ತಾಟ, ಇವೆಲ್ಲವೂ ಇಲ್ಲಿ ಸವಿಯಾದ ಸಮನ್ವಯ ಭಾವದಲ್ಲಿ ವಿವರಿಸಲ್ಪಟ್ಟಿವೆ.

ಈ ಸ್ತೋತ್ರವು ಶ್ರೀ ಗೌರಾಂಗನ ದಿವ್ಯ ವ್ಯಕ್ತಿತ್ವದ ಅತ್ಯಂತ ಪ್ರಧಾನ ಅಂಶಗಳನ್ನು ಕೂಡಾ ವರ್ಣಿಸುತ್ತದೆ.  ಅವೆಂದರೆ – ಅವನ ಅಲೌಕಿಕ ಲಕ್ಷಣಗಳು(ಅಪ್ರಾಕೃತ ವೈಶಿಷ್ಟ್ಯ), ಸದ್ಗುಣಗಳು,

ಸೌಂದರ್ಯ, ಆಕರ್ಷಣೆ, ಕರುಣೆ, ಔದಾರ್ಯ, ತೇಜಸ್ಸು, ಕ್ಷಮಾಶೀಲತೆ, ಉದಾತ್ತತೆ, ಜ್ಞಾನ, ವಿಶ್ವಾಸ, ದೃಢಸಂಕಲ್ಪ, ಕೃಷ್ಣಪ್ರೇಮದ ಉತ್ಕಟತೆಯ ಸ್ವಾನುಭಾವ(ಸ್ವಾನುಭಾವಾನಂದ), ಎಲ್ಲಾ ಜೀವಾತ್ಮರಲ್ಲಿ ಪ್ರೇಮಪೂರ್ವಕ ದಯೆಯ ಸಮಗ್ರ ನಿರ್ವಹಣೆ(ಸರ್ವ ಜೀವೆ ದಯಾ), ಶ್ರೀ ಕೃಷ್ಣನಲ್ಲಿ ಅಪರಿಮಿತ ಉತ್ಕಟ ಪ್ರೇಮ(ಕೃಷ್ಣಪ್ರೇಮಧಾಮರೂಪ) ಮತ್ತು ಕೊನೆಗೆ ದಿವ್ಯಪ್ರೇಮದ ಪರಮಾನಂದವನ್ನು ಇತರರೊಂದಿಗೆ ಹಂಚಿಕೊಳ್ಳುವ ದಯಾಪೂರ್ಣ ಉದಾತ್ತ ಮನೋಭಾವ(ಮಹಾವದಾನ್ಯ ಕೃಷ್ಣಪ್ರೇಮ ಪ್ರದಾತೃತ್ವ).

ಶ್ರೀ ಶಚೀ ಮಾತೆ, ಜಗನ್ನಾಥ ಮಿಶ್ರಾ, ಲಕ್ಷ್ಮಿಪ್ರಿಯಾ, ವಿಷ್ಣುಪ್ರಿಯಾ, ಶ್ರೀ ಅದ್ವೈತ, ಶ್ರೀ ನಿತ್ಯಾನಂದ, ಶ್ರೀ ಗದಾಧರ ಪಂಡಿತ, ಶ್ರೀವಾಸ ಪಂಡಿತ, ಸಾರ್ವಭೌಮ, ರಾಜಾ ಪ್ರತಾಪರುದ್ರ, ಶ್ರೀ ರೂಪ, ಶ್ರೀ ಸನಾತನ, ಶ್ರೀ ರಘುನಾಥ, ಶ್ರೀ ಸ್ವರೂಪ ಮತ್ತು ಶ್ರೀ ರಾಮಾನಂದ ಮುಂತಾದ ಅವನ ಕೆಲವು ಪ್ರೀತಿಯ ಭಕ್ತರೊಂದಿಗಿನ ಪ್ರೇಮಪೂರ್ಣ ಸಂಬಂಧಗಳ ಆನಂದಮಯ ದಿವ್ಯ ಸ್ವಭಾವ ಮತ್ತು ಗೌರಾಂಗನಲ್ಲಿ ಇವರೆಲ್ಲರಿಗಿದ್ದ ತೀವ್ರ ಪ್ರೇಮವು ಈ ಲೇಖಕನಿಂದ ನಿರ್ದಿಷ್ಟವಾಗಿ ಆಸ್ವಾದಿಸಲ್ಪಟ್ಟಿದೆ. ಇಂತಹ ಭಕ್ತಿಯಿಂದ ಗೌರಾಂಗನ ಮೇಲಿನ ತನ್ನ ಪ್ರೇಮವು ಹೆಚ್ಚಾಯಿತು ಎಂದು ಅವರು ಕಂಡುಕೊಂಡರು, ಹಾಗಾಗಿ ಇವರುಗಳ ಕೆಲವು ಬೇರೆ ಬೇರೆ ಪ್ರೇಮಪೂರ್ಣ ಲೀಲೆಗಳನ್ನು ಸಂಕ್ಷಿಪ್ತವಾಗಿ ಅತಿ ಪ್ರೀತಿಯಿಂದ ವಿವರಿಸುತ್ತಾರೆ.

ಮುಂದಕ್ಕೆ ಈ ಸ್ತೋತ್ರವು ಶ್ರೀ ಗೌರಾಂಗನು ಮಾಯಾವಾದಿಗಳ ದೋಷಯುಕ್ತ ನಿರಾಕಾರವಾದದ ಧ್ಯೇಯಗಳನ್ನು ಮನ್ನಿಸದೆ ಹೇಗೆ ಅತ್ಯಂತ ಕಷ್ಟಕರವಾದ ಮತ್ತು ಸದ್ವಿಚಾರಗಳ ಸಿದ್ಧಾಂತಿಕ ಸತ್ಯಗಳನ್ನು ನಿಖರವಾದ ಸಮರ್ಥನೆಗಳೊಂದಿಗೆ ವಿವರಿಸಿದನು ಮತ್ತು ಜೀವಾತ್ಮರು ಶ್ರೀಕೃಷ್ಣನೊಂದಿಗೆ ಅವನ ಆನಂದಮಯ ಲೀಲೆಗಳಲ್ಲಿ (ಚಿದ್ವಿಲಾಸ) ಪ್ರೇಮಪೂರ್ವಕ ಭಕ್ತಿಸೇವೆಯಲ್ಲಿ ನಿರಂತರಾಗಿ ಕೊಂಡಿರಬಹುದಾದ ಸುಂದರ ಬದುಕನ್ನು ಹೊಂದುವುದರಲ್ಲಿರುವ ಔನ್ನತ್ಯವನ್ನು ಸ್ಥಾಪಿಸಿದನು ಮತ್ತು ಅಚಿಂತ್ಯ ಭೇದಾಭೇದ ತತ್ತ್ವವೆಂದು ತಿಳಿಯಲ್ಪಡುವ ಕೃಷ್ಣ (ಶಕ್ತಿಮಾನ್) ಮತ್ತು ಅವನ ಶಕ್ತಿ(ಶಕ್ತಿ) ಗಳಮಧ್ಯೆ ಏಕಕಾಲದಲ್ಲಿ ಇರುವ ಏಕತೆ ಮತ್ತು ಭಿನ್ನತೆಯ ತನ್ನ ಸೌಂದರ್ಯಮಯ ನಿಗೂಢ ಆದರೆ ಸ್ವಯಂ ಪ್ರಮಾಣೀಕೃತ ನಿರ್ಣಾಯಕತತ್ತ್ವದ ಸ್ವಯಂಪ್ರಕಾಶ ಸತ್ಯವನ್ನು ಹೇಗೆ ಪ್ರಕಟಪಡಿಸಿದನು ಎಂದು ವಿವರಿಸುತ್ತದೆ.

ಈ ಲೇಖಕರು ಈ ಸ್ತೋತ್ರವನ್ನು ಸಂಸ್ಕೃತ ಭಾಷೆಯಲ್ಲಿ ಆಧ್ಯಾತ್ಮಿಕ ಆನಂದದ ನರ್ತನೆಯ ಗತಿಯನ್ನು ಪ್ರತಿನಿಧಿಸುವ ತುಣಕ ಎಂಬ ಛಂದಸ್ಸಿನಲ್ಲಿ ರಚಿಸಿದ್ದಾರೆ. ಅಂತಹ ಆನಂದಮಯ ನರ್ತನವು ಶ್ರೀ ಗೌರಾಂಗನ ಜೀವನದ ಪ್ರಧಾನ ಲಕ್ಷಣವಾಗಿತ್ತು ಅಲ್ಲದೇ ಶ್ರೀ ರೂಪ ಗೋಸ್ವಾಮಿ ಮತ್ತು ಶ್ರೀ ಕವಿರಾಜ ಗೋಸ್ವಾಮಿಯವರು ಕೂಡಾ ಅವರ ಕೆಲವು ರಚನೆಗಳಲ್ಲಿ ಈ ಛಂದವನ್ನು ಉಪಯೋಗಿಸಿದ್ದರಿಂದ ಈ ಲೇಖಕರು ವಿಶೇಷವಾಗಿ ಈ ಛಂದವನ್ನು ಆರಿಸಲು ಪ್ರೇರಿತರಾದರು.
ಅಪ್ರತಿಮ ಆಕರ್ಷಣೀಯ ಶೈಲಿಯ ವಿದ್ವತ್ಪೂರ್ಣ ಸುಂದರ ಕಾವ್ಯ ಮತ್ತು ತತ್ತ್ವಶಾಸ್ತ್ರದ ಅಗಾಧತೆಯ ನಡುವೆ ಸೃಷ್ಟಿಸಿದ ಅದ್ಭುತ ಸಮನ್ವಯವು ಈ ರಚನೆಯ ಇನ್ನೊಂದು ವೈಶಿಷ್ಟ್ಯವಾಗಿದೆ. ಈ ರಚನೆಯು ಓದುಗನಿಗೆ ಶ್ರೀ ಗೌರಾಂಗನ ಕುರಿತು ಸ್ವರೂಪ ದಾಮೋದರ, ರಾಮಾನಂದ, ರೂಪ ಗೋಸ್ವಾಮಿ, ರಘುನಾಥ ಗೋಸ್ವಾಮಿ, ಜೀವ ಗೋಸ್ವಾಮಿ ಮತ್ತು ಕವಿರಾಜ ಗೋಸ್ವಾಮಿಯವರ ಶಿಷ್ಯ

ಪರಂಪರೆಯು ರಚಿಸಿದ ಲೇಖನಗಳಲ್ಲಿ ಕಂಡುಬರುವ ಓದುಗನ ಹೃನ್ಮನಗಳನ್ನು ಸೂರೆಗೊಳ್ಳುವ ಅದೇ ವಿಶೇಷ ಸ್ವಾದವನ್ನು ನೆನಪಿಸುತ್ತದೆ. ಹಾಗಾಗಿ ಇದನ್ನು ಗೌರ ಸಾರಸ್ವತ ಸಾಹಿತ್ಯ ಲೋಕಕ್ಕೆ ಒಂದು ಅತ್ಯಮೂಲ್ಯ ಕಾಣಿಕೆ ಎಂದು ಪರಿಗಣಿಸಬಹುದು.

ಶ್ರೀಗೌರಾಂಗನ ಮೇಲೆ ಲೇಖಕನಿಗೆ ವೈವಿಧ್ಯಮಯ ರಸಗಳಲ್ಲಿ ಪ್ರಕಟವಾದ ಅಗಾಧ ಪ್ರೇಮವು ಈ ಸ್ತೋತ್ರದೊಳಗೆ ಅಮೃತಮಯ ಸಿದ್ಧಾಂತವಾಗಿ ಹರಿದಿದೆ. ಈ ರೀತಿಯ ಸಾಕ್ಷಾತ್ಕಾರವನ್ನು ಕವಿರಾಜ ಗೋಸ್ವಾಮಿಯವರು ಕೆಳಕಂಡ ಚೈತನ್ಯ ಚರಿತಾಮೃತದ ಶ್ಲೋಕದಲ್ಲಿ ಸುಂದರವಾಗಿ ವರ್ಣಿಸಿದ್ದಾರೆ.

**ಕೃಷ್ಣಲೀಲಾ ಅಮೃತ ಸಾರ, ತಾರ ಶತ ಶತ ಧಾರ**
**ದಶ ದಿಕೆ ಬಹೆ ಯಾಹಾ ಹೈತೆ**
**ಸೆ ಚೈತನ್ಯ ಲೀಲಾ ಹಯ, ಸರೋವರ ಅಕ್ಷಯ**
**ಮನೋ ಹಂಸ ಚರಾಹ ತಾಹಾತೆ**

**ಕೃಷ್ಣಲೀಲೆ ಸರ್ವೋತ್ಕೃಷ್ಟ ದಿವ್ಯ ಅಮೃತ ಮತ್ತು ಚೈತನ್ಯ ಲೀಲೆಯು ನೂರಾರು ಧಾರೆಗಳಾಗಿ ಪ್ರವಹಿಸಿ ಎಲ್ಲಾ ದಿಕ್ಕುಗಳಿಗೆ ಹರಿದು ಭಕ್ತರ ಹೃದಯಗಳನ್ನು ತುಂಬುವ ಆ ಅಮೃತದ ಬತ್ತಿಹೋಗದಿರುವ ಒಂದು ಸರೋವರವಾಗಿದೆ. ಹಾಗಾಗಿ, ಅಮೃತವನ್ನು ಬಯಸುವ ಓ ಗೆಳೆಯನೇ ! ನಿನ್ನ ಮನಸ್ಸನ್ನು ಆ ಸರೋವರದೊಳಗೆ ರಾಜ ಹಂಸದಂತೆ ಈಜಲು ಬಿಡು.**
**(ಚೈತನ್ಯ ಚರಿತಾಮೃತ ೨-೨೫-೨೭೧)**

ಹಾಗಾಗಿ, ಈ ಸ್ತೋತ್ರದ ನೆಚ್ಚಿನ ಲೇಖಕರಾದ ಶ್ರೀಲ ಭಕ್ತಿರಕ್ಷಕ ಶ್ರೀಧರದೇವ ಗೋಸ್ವಾಮಿಯವರು ನಿಶ್ಚಯವಾಗಿ ಚೈತನ್ಯಲೀಲೆಯ ಈ ಕೆರೆಯಲ್ಲಿ ಈಜಿರುತ್ತಾರೆ ಮತ್ತು ಅಮೃತವನ್ನು ಸವಿಯ ಬಯಸುವ ಇತರ ಎಲ್ಲಾ ಭಕ್ತರನ್ನು ಈ ಆನಂದಮಯ ಅನುಭವವನ್ನು ಅವರೊಡನೆ ಹಂಚಿಕೊಳ್ಳಲು ಆಹ್ವಾನಿಸುತ್ತಿದ್ದಾರೆ ಎಂದು ತಿಳಿದುಕೊಳ್ಳಬಹುದು.

# ಶ್ರೀ ಶ್ರೀ ಪ್ರೇಮಧಾಮದೇವ ಸ್ತೋತ್ರ

### ಶ್ಲೋಕ ೧

**ದೇವ ಸಿದ್ಧ ಮುಕ್ತ ಯುಕ್ತ ಭಕ್ತವೃಂದ ವಂದಿತಮ್**
**ಪಾಪತಾಪ ದಾವದಾಹ ದಗ್ಧದುಃಖ ಖಂಡಿತಮ್ ।**
**ಕೃಷ್ಣನಾಮ ಸೀಧುಸಿಂಧು ಮಗ್ನ ದಿಕ್ಚರಾಚರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೧॥**

ಶುದ್ಧಪ್ರೇಮದ ದಿವ್ಯಧಾಮವಾದ ಹೊಂಬಣ್ಣದ ನನ್ನ ದೇವ, ಸೌಂದರ್ಯಮೂರ್ತಿ, ಶ್ರೀ ಗೌರಸುಂದರನಿಗೆ ಜಯವಾಗಲಿ. ದೇವತೆಗಳು, ಸಿದ್ಧರು, ಮುಕ್ತರು, ಯೋಗಿಗಳು ಮತ್ತು ಶ್ರೀಕೃಷ್ಣನ ಶುದ್ಧಭಕ್ತರು ನಿರಂತರ ಅವನ ಗುಣಗಾನ ಮಾಡುತ್ತಿರುತ್ತಾರೆ. ತಮ್ಮ ಸ್ವಯಂ ಪಾಪಗಳ ದಾಹದ ಬೇಗುದಿಯಿಂದ ಯಾತನೆಪಡುತ್ತಿರುವ ಮತ್ತು ಅವುಗಳ ಫಲವಾಗಿ ಭೌತಿಕ ಜಗತ್ತಿನ ಮಹಾಕಾಡ್ಗಿಚ್ಚಿನಲ್ಲಿ ಸತತವಾಗಿ ಬೇಯುತ್ತಿರುವ ಜೀವಾತ್ಮರ ಎಲ್ಲಾ ಕ್ಲೇಶಗಳನ್ನು ಒಂದೊಮ್ಮೆಗೇ ಅವನು ನಿವಾರಿಸಿಬಿಡುತ್ತಾನೆ. ದಿವ್ಯ ಔದಾರ್ಯತೆಯ ವಿಶಾಲ ಸಾಗರವಾದ ಮತ್ತು ಶ್ರೀಕೃಷ್ಣನ ದಿವ್ಯನಾಮಗಳೆಂಬ ಸವಿಯಾದ ಅಮೃತದ ಧಾಮದ ದೇವನಾದ ಅವನೇ ಧನ್ಯ.

### ಶ್ಲೋಕ ೨

**ಸ್ವರ್ಣಕೋಟಿ ದರ್ಪಣಾಭ ದೇಹವರ್ಣ ಗೌರವಮ್**
**ಪದ್ಮ ಪಾರಿಜಾತಗಂಧ ವಂದಿತಾಂಗ ಸೌರಭಮ್ ।**
**ಕೋಟಿಕಾಮ ಮೂರ್ಛಿತಾಂಘ್ರಿ ರೂಪರಾಸ ರಂಗರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨॥**

ಅವನ ದೇಹದ ಗೌರವರ್ಣದ ಕಾಂತಿಯು ಕೋಟಿ ಕೋಟಿ ಸ್ವರ್ಣದರ್ಪಣಗಳ ಪ್ರಭೆಯನ್ನು ಮೀರಿಸುತ್ತದೆ. ಅವನ ದೇಹದ ಸವಿಯಾದ ಸುಗಂಧವು ಪರಿಮಳಯುಕ್ತ ತಾವರೆ ಮತ್ತು ಪಾರಿಜಾತದ ಪುಷ್ಪಗಳು ವಿನಮ್ರವಾಗಿ ಅದಕ್ಕೆ ತಲೆಬಾಗಿ ತಮ್ಮ ಆರಾಧನಾಪೂರ್ವಕ ಪ್ರಾರ್ಥನೆಗಳನ್ನು ಸಲ್ಲಿಸುವಂತಿದೆ. ಸರಿಸಾಟಿಯಿಲ್ಲದ ಅವನ ಸೌಂದರ್ಯಮಯ ರೂಪವನ್ನು ನೋಡಿ ಸಹಿಸಲು ಸಾಧ್ಯವಾಗದ, ತಮ್ಮ ಸೌಂದರ್ಯಕ್ಕೆ ಹೆಮ್ಮೆಯಿಂದ ಬೀಗುತ್ತಿರುವ ಕೋಟ್ಯಂತರ ಮನ್ಮಥರು ಆಘಾತಕ್ಕೊಳಗಾಗಿ ಅವನಪಾದಕಮಲಗಳಮೇಲೆ ಪ್ರಜ್ಞೆತಪ್ಪಿ ಬೀಳುತ್ತಾರೆ. ಅವನ ಅಂಗಾಂಗಗಳು ತನ್ನ ಸುಂದರರೂಪದಿಂದ ಉದ್ಭವಿಸಿ ಸತತವಾಗಿ ಹರಿಯುವ ಪ್ರೇಮದ ಜೀವಂತರಸಭಾವಗಳಾಗಿವೆ. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೩

**ಪ್ರೇಮನಾಮ ದಾನಜನ್ಯ ಪಂಚತತ್ತ್ವಕಾತ್ಮಕಮ್**
**ಸಾಂಗದಿವ್ಯ ಪಾರ್ಶದಾಸ್ತ್ರ ವೈಭವಾವತಾರಕಮ್ ।**
**ಶ್ಯಾಮಗೌರ ನಾಮಗಾನ ನೃತ್ಯಮತ್ತ ನಾಗರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೩॥**

ಪಂಚಮಪುರುಷಾರ್ಥವಾದ ಕೃಷ್ಣಪ್ರೇಮವನ್ನು ಹೊಂದುವುದಕ್ಕೆ ದಾರಿತೋರುವ ಶ್ರೀಕೃಷ್ಣನ ದಿವ್ಯನಾಮಗಳ ಮುಕ್ತ ವಿತರಣೆಯನ್ನು ಚುರುಕುಗೊಳಿಸುವ ಸಲುವಾಗಿ ಅವನು ತನ್ನನ್ನು ತಾನು ಪಂಚತತ್ತ್ವವೆಂಬ ಐದುವಿಧದ ಶಕ್ತಿಗಳಾಗಿ ವಿಸ್ತರಿಸಿಕೊಂಡ. ತನ್ನ ದಿವ್ಯ ಅಂಗಗಳಿಂದ ಮತ್ತು ದಿವ್ಯ ಶಸ್ತ್ರಗಳಿಂದ ಸಂಪೂರ್ಣ ಸಜ್ಜಿತನಾಗಿ ತನ್ನ ಸಂಗಡಿಗರೊಡಗೂಡಿ ತನ್ನ ಸಕಲ ಐಶ್ವರ್ಯಗಳೊಂದಿಗೆ ಅವನು ಈ ಧರೆಯಲ್ಲಿ ಅವತರಿಸಿದ. ಪರಮಪುರುಷ  ಸ್ವಯಂ ಶ್ಯಾಮಸುಂದರನಾಗಿರುವ ಅವನು ಒಬ್ಬ ಸಾಮಾನ್ಯ ನಾಗರಿಕನಂತೆ ನದಿಯಾ ಗ್ರಾಮದ ಬೀದಿಗಳಲ್ಲಿ ಶ್ರೀಕೃಷ್ಣನ ದಿವ್ಯನಾಮಗಳನ್ನು ಆನಂದಾತಿಶಯದಿಂದ ಹಾಡುತ್ತಾ, ನರ್ತಿಸುತ್ತಾ ಗೌರಸುಂದರನಾಗಿ ಕಾಣಿಸಿಕೊಂಡ. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೪

**ಶಾಂತಿಪೂರ್ಯಧೀಶ ಕಲ್ಯಧರ್ಮ ದುಃಖ ದುಃಸಹಮ್**
**ಜೀವದುಃಖಹಾನಭಕ್ತ ಸೌಖ್ಯದಾನ ವಿಗ್ರಹಮ್ ।**
**ಕಲ್ಯಘೌಘನಾಶ ಕೃಷ್ಣನಾಮ ಸೀಧುಸಂಚರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೪॥**

ಅಧಾರ್ಮಿಕ ಸಿದ್ಧಾಂತಗಳ ಪ್ರಭಾಕ್ಕೊಳಗಾಗಿರುವ  ಕಲಿಯುಗದ ದಯನೀಯ ಸ್ಥಿತಿಯಿಂದ ಬೇಸತ್ತುಹೋಗಿದ್ದ ಅವನ ಭಕ್ತನಾದ ಶಾಂತಿಪುರಾಧೀಶ ಅದ್ವೈತಾಚಾರ್ಯ ಪ್ರಭುಗಳ ದುಃಖವನ್ನು ಅವನು ಸಹಿಸದಾದನು. ಹಾಗಾಗಿ ಅವನು ಶ್ರೀಕೃಷ್ಣ ನಾಮಾಮೃತವನ್ನು ಯಥೇಚ್ಛವಾಗಿ ದಾನಮಾಡುತ್ತಾ ಕಲಿಯ ವಿಷವನ್ನು ನಾಶಮಾಡಿ, ಜೀವಾತ್ಮರನ್ನು ಸಂಕಷ್ಟಗಳಿಂದ ಬಿಡುಗಡೆಗೊಳಿಸಿ ತನ್ನ ಭಕ್ತನಿಗೆ ಆನಂದವನ್ನು ಪ್ರದಾನಿಸುವ ಮೂರ್ತಿಯಾಗಿ ಕಾಣಿಸಿಕೊಂಡ. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೫

**ದ್ವೀಪನವ್ಯ ಗಾಂಗವಂಗ ಜನ್ಮಕರ್ಮ ದರ್ಶಿತಮ್**
**ಶ್ರೀನಿವಾಸ ವಾಸಧನ್ಯ ನಾಮರಾಸ ಹರ್ಷಿತಮ್ ।**
**ಶ್ರೀಹರಿಪ್ರಿಯೇಶ ಪೂಜ್ಯಧೀ ಶಚೀ ಪುರಂದರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೫॥**

ಅವನ ಪವಿತ್ರ ಜನನ ಮತ್ತು ದಿವ್ಯ ಲೀಲೆಗಳು ಪುಣ್ಯನದಿಯಾದ ಗಂಗಾತೀರದ ಶ್ರೀ ನವದ್ವೀಪ ಎಂಬ ಸ್ಥಳದಲ್ಲಿ ಉಂಟಾದವು. ಶ್ರೀಕೃಷ್ಣನ ದಿವ್ಯನಾಮದ ಅಲೌಕಿಕ ಆನಂದಮಯ ರಸವನ್ನು ಎಲ್ಲರ ಹೃದಯದೊಳಗೆ ತುಂಬುತ್ತಾ ಶ್ರೀನಿವಾಸರ ಮನೆಯನ್ನು ಹರಸಿದನು. ತನ್ನ ತಾಯಿ ಶ್ರೀಮತಿ ಶಚೀದೇವಿ, ವಿದ್ಯಾವಂತ ತಂದೆ ಶ್ರೀ ಜಗನ್ನಾಥ ಮಿಶ್ರಾ ಮತ್ತು ಪತ್ನಿಯರಾದ ಶ್ರೀಮತಿ ಲಕ್ಷ್ಮಿಪ್ರಿಯಾ ಮತ್ತು ಶ್ರೀಮತಿ ವಿಷ್ಣುಪ್ರಿಯಾರನ್ನು ವಿಧಿಬದ್ಧವಾಗಿ ಪ್ರೀತ್ಯಾದರಗಳಿಂದ ಆದರಿಸಿ ಗೌರವಿಸಿದನು. ಗೌರಸುಂದರನು ಅವರೆಲ್ಲರ ಪ್ರಾಣವಾಗಿದ್ದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೬

**ಶ್ರೀಶಚೀದುಲಾಲ ಬಾಲ್ಯ ಬಾಲಸಂಗ ಚಂಚಲಮ್**
**ಆಕುಮಾರ ಸರ್ವಶಾಸ್ತ್ರ ದಕ್ಷತರ್ಕ ಮಂಗಳಮ್ ।**
**ಛಾತ್ರಸಂಗ ರಂಗ ದಿಗ್ವಿಗೀಷು ದರ್ಪ ಸಂಹರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೬॥**

ಶ್ರೀಮತಿ ಶಚೀದೆವಿಯ ಮಗನಾಗಿ ಅವನು ಇತರ ಬಾಲಕರೊಂದಿಗೆ ತುಂಟತನದ ಲೀಲೆಗಳನ್ನು ಆನಂದಿಸಿದನು. ಕೌಮಾರ್ಯದಲ್ಲಿಯೇ ಎಲ್ಲಾ ಶಾಸ್ತ್ರಗಳಲ್ಲಿ ಪಾರಂಗತನಾಗಿ ಪ್ರಚಲಿತ ತರ್ಕಶಾಸ್ತ್ರದ ವಿಧಾನದಲ್ಲಿ ತನಗಿದ್ದ ಪಾಂಡಿತ್ಯದಿಂದ ಎಲ್ಲಾ ಜೀವಾತ್ಮರ ಒಳಿತಿಗಾಗಿ ಮಂಗಳಕರವಾದ ಭಕ್ತಿಮಾರ್ಗವನ್ನು ಸ್ಥಾಪಿಸಿದನು. ದರ್ಪದಿಂದ ಮೆರೆಯುತ್ತಿದ್ದ ಪ್ರಖ್ಯಾತ ದಿಗ್ವಿಜಯಿ ಪಂಡಿತನನ್ನು ತನ್ನ ಶಿಷ್ಯವೃಂದರೊಂದಿಗೆ ಗಂಗಾನದಿಯ ದಂಡೆಯ ಮೇಲೆ ಪರಾಜಯಗೊಳಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೭

**ವರ್ಜ್ಯಪಾತ್ರಸಾರಮೇಯ ಸರ್ಪಸಂಗಖೇಲನಮ್**
**ಸ್ಕಂಧವಾಹಿಚೌರ ತೀರ್ಥವಿಪ್ರಚಿತ್ರಲೀಲನಮ್ ।**
**ಕೃಷ್ಣನಾಮಮಾತ್ರಬಾಲ್ಯ ಕೋಪಶಾಂತಿಸೌಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೭॥**

ಅವನ ಬಾಲ್ಯಲೀಲೆಗಳು ತುಂಬಾ ಅದ್ಭುತವಾಗಿದ್ದವು. ನಿರುಪಯೋಗಿ ಪಾತ್ರೆಗಳೊಂದಿಗೆ, ನಾಯಿಗಳು ಹಾಗೂ ವಿಷಪೂರಿತ ಸರ್ಪಗಳೊಂದಿಗೆ ಅವನು ಆಟವಾಡುತ್ತಿದ್ದನು. ಒಂದುಸಾರಿ ಅವನ ಬಟ್ಟೆಗಳನ್ನು ಕದಿಯುವ ಸಲುವಾಗಿ ಒಬ್ಬ ಕಳ್ಳನು ಅವನನ್ನು ಹೊತ್ತುಕೊಂಡುಹೋಗಿದ್ದನು. ಸತತವಾಗಿ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತಿದ್ದ ತೀರ್ಥವಿಪ್ರ ಎಂಬ ಬ್ರಾಹ್ಮಣನ ಮುಂದೆ ಪ್ರತ್ಯಕ್ಷನಾಗಿ ಅವನಿಗೆ ತನ್ನ ಊಟದ ಅವಶೇಷವನ್ನು ಪ್ರಸಾದವಾಗಿ ನೀಡಿ ಅವನನ್ನು ಹರಸಿದನು. ಅವನು ಹಠಹಿಡಿದು ಅತ್ತಾಗ ಶ್ರೀಕೃಷ್ಣನ ದಿವ್ಯನಾಮಗಳ ಕೀರ್ತನೆಯಿಂದ ಮಾತ್ರ ಅವನನ್ನು ಸಮಾಧಾನಪಡಿಸಲು ಸಾಧ್ಯವಾಗುತ್ತಿತ್ತು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೮

**ಸ್ನಾನಗಾಂಗವಾರಿ ಬಾಲಸಂಗರಂಗ ಖೇಲನಮ್**
**ಬಾಲಿಕಾದಿ ಪಾರಿಹಾಸ್ಯಭಂಗಿ ಬಾಲ್ಯಲೀಲನಮ್ ।**
**ಕೂಟತರ್ಕ ಛಾತ್ರಶಿಕ್ಷಕಾದಿ ವಾದತತ್ಪರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೮॥**

ಗಂಗಾನದಿಯಲ್ಲಿ ಸ್ನಾನಮಾಡುವಾಗ ತನ್ನ ಬಾಲ್ಯಸ್ನೇಹಿತರೊಂದಿಗೆ ಅದ್ಭುತವಾಗಿ ವಿಧವಿಧವಾದ ಆಟಗಳನ್ನು ಆಡುವನು. ಒಂದೊಂದುಸಾರಿ ಬಾಲಕಿಯರೊಂದಿಗೆ ಅವರನ್ನು ಅಣಕಿಸುವ ರೀತಿಯಲ್ಲಿ ಸರಸದಿಂದ ಮಾತನಾಡುವನು. ಜಟಿಲ ವಾದಗಳನ್ನು ತಾನೇ ಮಂಡಿಸಿ ಅವುಗಳಿಗೆ ಮರುತರ್ಕಗಳನ್ನೂ ತಾನೇ ಮಂಡಿಸಿ  ತನ್ನ ಗುರುಗಳನ್ನು ಮತ್ತು ವಿದ್ಯಾರ್ಥಿಗಳನ್ನು ವಿಸ್ಮಯಗೊಳಿಸುವನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೯

**ಶ್ರೀನಿಮಾಯಿಪಂಡಿತೇತಿ ನಾಮದೇಶವಂದಿತಮ್**
**ನವ್ಯತರ್ಕ ದಕ್ಷಲಕ್ಷ ದಂಭಿದಂಭ ಖಂಡಿತಮ್ ।**
**ಸ್ಥಾಪಿತಾರ್ಥ ಖಂಡಖಂಡ ಖಂಡಿತಾರ್ಥ ಸಂಭರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೯॥**

ದೇಶದೆಲ್ಲೆಡೆ ಅವನು ನಿಮಾಯಿ ಪಂಡಿತನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು ಮತ್ತು ಎಲ್ಲರಿಂದಲೂ ಗೌರವಿಸಲ್ಪಟ್ಟಿದ್ದನು. ತನ್ನ ಅನೇಕ ಬಿಚ್ಚುಮನಸ್ಸಿನ ಸಹಜಸಿದ್ಧ ತರ್ಕಗಳಿಂದ ಅವನು ಆ ಕಾಲದಲ್ಲಿ ಜಂಭದಿಂದ ಮೆರೆಯುತ್ತಿದ್ದ ನ್ಯಾಯಶಾಸ್ತ್ರದ ಪಂಡಿತರುಗಳ ಅಹಂಕಾರವನ್ನು ನಿರ್ಮೂಲಗೊಳಿಸುತ್ತಿದ್ದನು. ಹಾಗೆಯೇ ಅವರ ಸಾಂಪ್ರದಾಯಿಕ ವಾದಗಳನ್ನು ಖಂಡಿಸಿ ತಾನೇ ಮತ್ತೆ ಅವುಗಳಿಗೆ ಅರ್ಥಗಳನ್ನು ಪುನಃಸ್ಥಾಪಿಸುತ್ತಿದ್ದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೧೦

**ಶ್ಲೋಕಗಾಂಗ ವಂದನಾರ್ಥ ದಿಗ್ಜಿಗೀಷು ಭಾಷಿತಮ್**
**ವ್ಯತ್ಯಲಂಕೃತಾದಿ ದೋಷ ತರ್ಕಿತಾರ್ಥ ದೂಷಿತಮ್ ।**
**ಧ್ವಸ್ತಯುಕ್ತಿ ರುದ್ಧಬುದ್ಧಿ ದತ್ತಧೀಮದಾದರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೧೦॥**

ಕೇಶವ ಕಾಶ್ಮೀರಿಯೆಂಬ ಪ್ರಸಿದ್ಧಪಂಡಿತನು  ಗಂಗಾಮಾತೆಯನ್ನು ಶ್ಲಾಘಿಸುವ ಶ್ಲೋಕಗಳನ್ನು ನಿರಾಯಾಸವಾಗಿ ರಚಿಸಿ ವಿವರಿಸಿದಾಗ ಅವುಗಳಲ್ಲಿನ ಅಲಂಕಾರಿಕ ವ್ಯಾಕರಣದೋಷಗಳನ್ನು ನಿಮಾಯಿಯು ಕಂಡುಹಿಡಿದನು. ಅವಮಾನಿತನಾದ ಪಂಡಿತನು ತನ್ನನ್ನು ತಾನು ಸಮರ್ಥಿಸಿಕೊಳ್ಳಲು

ಮುಂದಿಟ್ಟ ಜಟಿಲವಾದಗಳು ಕೂಡಾ ನಿಮಾಯಿಪಂಡಿತನಿಂದ ಸೋಲನ್ನು ಕಂಡವು. ಕೇಶವ ಕಾಶ್ಮೀರಿಯ ಅವೈಚಾರಿಕ ಜ್ಞಾನವನ್ನು ಮತ್ತು ದುಡುಕುಬುದ್ಧಿಯನ್ನು ವಿನಮ್ರತೆಯಿಂದ ಪರಿಶೀಲಿಸಿ ಅವನ ಗರ್ವವನ್ನು ಮುರಿದ ನಂತರವೂ ಗೌರಸುಂದರನು ಆ ಪಂಡಿತನನ್ನು ವಿದ್ಯಾವಂತ ಸಂಸ್ಕೃತ ವಿದ್ವಾಂಸರಿಗೆ ಯಥೋಚಿತವಾಗಿ ಸಲ್ಲತಕ್ಕ ಮರ್ಯಾದೆಗಳೊದಿಗೆ ಸತ್ಕರಿಸಿ ಗೌರವಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೧೧

**ಸೂತ್ರವೃತ್ತಿ ಟಿಪ್ಪಣೀಷ್ಠ ಸೂಕ್ಷ್ಮ ವಾಚನಾದ್ಭುತಮ್**
**ಧಾತುಮಾತ್ರ ಕೃಷ್ಣಶಕ್ತಿ ಸರ್ವವಿಶ್ವ ಸಂಭೃತಮ್ ।**
**ರುದ್ಧಬುದ್ಧಿ ಪಂಡಿತೌಘ ನಾನ್ಯಯುಕ್ತಿ ನಿರ್ಧರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೧೧॥**

ಸೂತ್ರಗಳಿಗೆ ಅವನು ನೀಡುತ್ತಿದ್ದ ಅದ್ಭುತವಾದ ದೀರ್ಘ ವಿವರಣೆಗಳು ಅರ್ಥೈಸಿಕೊಳ್ಳಲು ಬಹಳ ಕ್ಲಿಷ್ಟವಾಗಿದ್ದವು. ಅವು ಸೂತ್ರಗಳ ಸ್ವಾಭಾವಿಕ ಅರ್ಥಗಳನ್ನು ಮತ್ತು ಹಲವು ವೈವಿಧ್ಯಮಯ ಅಂಶಗಳನ್ನು ಹೊರಗೆಡಹುತ್ತಿದ್ದವು. ಧಾತುಗಳೆಂದು ಕರೆಯಲ್ಪಡುವ ಸಂಸ್ಕೃತ ಭಾಷೆಯ ಏಳುಸಾವಿರ ಮೂಲಶಬ್ದಗಳು ಅವುಗಳ ಪರಿಪೂರ್ಣ ಅರ್ಥಗಳಲ್ಲಿ ಜಗತ್ತಿನ ಏಕೈಕ ಆಸರೆಯಾದ ಶ್ರೀಕೃಷ್ಣನ ಶಕ್ತಿಗಳನ್ನು ಸೂಚಿಸುತ್ತವೆ ಎಂದು ಸಿದ್ಧಪಡಿಸಿದನು. ಹಾಗಾಗಿ ನೆರೆದ ಬುದ್ಧಿವಂತ ಪಂಡಿತರುಗಳು ಸಂಪೂರ್ಣವಾಗಿ ಕಕ್ಕಾಬಿಕ್ಕಿಯಾಗಿ ದಿಕ್ಕುತೋಚದೇ ಗೌರಸುಂದರನ ಮುಂದೆ ತಮ್ಮ ನಿರ್ಣಯಗಳನ್ನು ಸಿದ್ಧಪಡಿಸಲು ಅಸಫಲರಾದರು. ಅವರು ಅವನಮುಂದೆ ಸುಮ್ಮನೆ ಮೂಕವಿಸ್ಮಿತರಾಗಿ ಕುಳಿತುಕೊಳ್ಳಬೇಕಾಯಿತು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೧೨

**ಕೃಷ್ಣದೃಷ್ಟಿ ಪಾತಹೇತು ಶಬ್ದಕಾರ್ಥ ಯೋಜನಮ್**
**ಸ್ಫೋಟವಾದ ಶೃಂಖಲೈಕ ಭಿತ್ತಿಕೃಷ್ಣ ವೀಕ್ಷಣಮ್ ।**
**ಸ್ಥೂಲಸೂಕ್ಷ್ಮ ಮೂಲಲಕ್ಷ್ಯ ಕೃಷ್ಣಸೌಖ್ಯ ಸಂಭರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೧೨॥**

ಸ್ಫೋಟವಾದ ಎಂದು ಕರೆಯಲ್ಪಡುವ ಮಾತಿನ ಎಲ್ಲಾ ಶಬ್ದಗಳ ಮತ್ತು ಅವುಗಳ ಅರ್ಥಗಳ ನಡುವೆ ಇರುವ ಪರಸ್ಪರ ಸಂಬಂಧವು ಭಗವಾನ್ ಶ್ರೀಕೃಷ್ಣನ ಒಂದೇ ಒಂದು ದೃಷ್ಟಿಯ ಕ್ರಿಯೆಯಿಂದ ಉಂಟಾಗಿದೆ, ಸ್ಫೋಟವಾದದ ವಿದ್ವಾಂಸರುಗಳು ತಮ್ಮ ವ್ಯಾಕರಣಗಳ ವಿಧಿನಿಯಮಗಳನ್ನು ಸ್ಫೋಟದ ಸುತ್ತ ಹೆಣೆಯುತ್ತಾರಾದರೂ, ಯಥಾರ್ಥವಾಗಿ ಭಗವಾನ್ ಶ್ರೀಕೃಷ್ಣನ ಸವಿಸಂಕಲ್ಪವೊಂದೇ ಸ್ಫೋಟವಾದದ ಅರ್ಥಗಳಿಗಿರುವ ಏಕೈಕ ಹಿನ್ನೆಲೆಯಾಗಿದೆ ಮತ್ತು ಅವನ ಸ್ಥೂಲ ಮತ್ತು ಸೂಕ್ಷ್ಮ ಶಕ್ತಿಗಳ ರೂಪಗಳು ಮತ್ತು ಅವುಗಳ ಪರಸ್ಪರ ಕ್ರಿಯೆಗಳ ಕಟ್ಟಕಡೆಯ ಉದ್ದೇಶವು ಪರಮಪುರುಷ ಭಗವಾನ್ ಶ್ರೀಕೃಷ್ಣನಿಗೆ ಸಂತೃಪ್ತಿಯನ್ನು ದೊರಕಿಸುವುದಾಗಿದೆ. ಇದು ಅವನ ಲೀಲೆಗಳ ಒಂದು

ಲಕ್ಷಣವಾಗಿದೆ ಎಂದು ವಿವರಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೧೩

**ಪ್ರೇಮರಂಗಪಾಠಭಂಗ ಛಾತ್ರಕಾಕುಕಾತರಮ್**
**ಛಾತ್ರಸಂಗ ಹಸ್ತತಾಲ ಕೀರ್ತನಾದ್ಯ ಸಂಚರಮ್ ।**
**ಕೃಷ್ಣನಾಮ ಸೀಧುಸಿಂಧು ಮಗ್ನ ದಿಕ್ಚರಾಚರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೧೩॥**

ಗಯೆಯಿಂದ ಹಿಂತಿರುಗಿದ ನಂತರ ಅಂತರಂಗದೊಳಗಿನ ದಿವ್ಯಪ್ರೇಮದ ಹೆಚ್ಚಳದಿಂದಾಗಿ, ತನ್ನ ವಿದ್ವತ್ಪೂರ್ಣ ಧ್ಯೇಯೋದ್ದೇಶಗಳನ್ನು ಮಹಾಪ್ರಭುವು ಮುಂದುವರಿಸಲು ಅಸಾಧ್ಯವಾಯಿತು. ನಿಮಾಯಿ ಪಂಡಿತನ ವಿದ್ಯಾರ್ಥಿಗಳು ಅವನ ಆಶ್ರಯದಲ್ಲಿ ವ್ಯಾಸಂಗ ಮಾಡುವ ಅವಕಾಶದಿಂದ ಶಾಶ್ವತವಾಗಿ ವಂಚಿತರಾದರು. ಅವಕಾಶ ವಂಚಿತರಾದ ಅವರು ತಮ್ಮನ್ನು ತಾವು ಅಭಾಗ್ಯರು ಮತ್ತು ಪತಿತರು ಎಂದು ದೂಷಿಸಿಕೊಂಡು ಅತ್ಯಂತ ದೈನ್ಯತೆಯಿಂದ ಅವನಲ್ಲಿ ಮೊರೆಯಿಡುತ್ತಾ, ಒಬ್ಬ ಶಿಕ್ಷಕನಾಗಿ ನಿಮಾಯಿ ಪಂಡಿತನ ಪ್ರತಿಭೆಯನ್ನು ಶ್ಲಾಘಿಸಿದರು. ತನ್ನ ವಿದ್ಯಾರ್ಥಿಗಳ ಮೇಲಿನ ಅನುಕಂಪದಿಂದ ನಿಮಾಯ್ ಪಂಡಿತನು ಅತೀವ ದುಃಖವನ್ನು ಹೊಂದಿದವನಾಗಿ, ಅವರಿಗೆ ತನ್ನ ಅನುಗ್ರಹಗಳನ್ನು ನೀಡುತ್ತಾ, ಮಿತಿಮೀರಿದ ಪ್ರೇಮಾನಂದದಿಂದ ಅದೇ ವಿದ್ಯಾರ್ಥಿಗಳ ಸಂಗಡ ಶ್ರೀಕೃಷ್ಣನ ದಿವ್ಯನಾಮಗಳ ಕೀರ್ತನೆಗಳನ್ನು ಹಾಡಲು ಪ್ರಾರಂಭಿಸಿದನು. ಅವನ ವಿದ್ಯಾರ್ಥಿಗಳೆಲ್ಲರೂ, ಕೈಚಪ್ಪಾಳೆ ತಟ್ಟುತ್ತಾ ಅವನೊಡನೆ ಸಂಕೀರ್ತನೆಯಲ್ಲಿಸೇರಿಕೊಂಡರು. ಇದು ಅವನ ಸಂಕೀರ್ತನ ಆಂದೋಳನದ ಶುಭಾರಂಭವಾಗಿತ್ತು. ತರುವಾಯ ಎಲ್ಲಾ ದಿಕ್ಕುಗಳೂ ಶ್ರೀಕೃಷ್ಣನ ದಿವ್ಯನಾಮಗಳ ಕೀರ್ತನೆಯ ಪರಮಾನಂದದಿಂದ ಹರಿದ ಅಮೃತಸಾಗರದಲ್ಲಿ ಮುಳುಗಿಹೋದವು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೧೪

**ಆರ್ಯ ಧರ್ಮಪಾಲಲಬ್ಧ ದೀಕ್ಷಕೃಷ್ಣ ಕೀರ್ತನಮ್**
**ಲಕ್ಷಲಕ್ಷ ಭಕ್ತಗೀತ ವಾದ್ಯ ದಿವ್ಯನರ್ತನಮ್ ।**
**ಧರ್ಮಕರ್ಮ ನಾಶದಸ್ಯು ದುಷ್ಟ ದುಷ್ಕೃತೋದ್ಧರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೧೪॥**

ಅವನು ವೇದಶಾಸ್ತ್ರಗಳನ್ನು ಆಧರಿಸಿದ ಧಾರ್ಮಿಕ ಆದೇಶಗಳನ್ನು ಪಾಲಿಸಿದನು ಮತ್ತು ಕೃಷ್ಣ ಕೀರ್ತನೆಯನ್ನು ಪರಿಚಯಿಸಲು ತನ್ನ ಗುರುವಿನ ಆದೇಶಗಳ ಆಶ್ರಯವನ್ನು ಪಡೆದನು. ಅನೇಕ ಸಂಗೀತ ವಾದ್ಯಗಳೊಂದಿಗೆ ಹಾಡುತ್ತಾ, ಕುಣಿಯುತ್ತಿರುವ ಲಕ್ಷಾಂತರ ಭಕ್ತಸಮೂಹದ ನಡುವೆಗೌರಸುಂದರನು ತನ್ನ ಪರಮಾನಂದಮಯ ಪ್ರೇಮನೃತ್ಯದಲ್ಲಿ ಎಂದೆಂದಿಗೂ ಮಗ್ನನಾಗಿರುತ್ತಾನೆ. ಅವನು ಜಗತ್ತಿನಲ್ಲಿ ಧಾರ್ಮಿಕ ಮತ್ತು ಮಂಗಳಕಾರಿ ಕ್ರಿಯೆಗಳ ಅಧಃಪತನಕ್ಕೆ ಕಾರಣರಾಗಿರುವ ಕುಟಿಲ ಮತ್ತು ಪಾಪಿ ಜನರ ಏಕೈಕ ಉದ್ಧಾರಕನಾಗಿದ್ದಾನೆ. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೧೫

**ಮ್ಲೇಚ್ಛರಾಜ ನಾಮಬಾಧ ಭಕ್ತಭೀತಿ ಭಂಜನಮ್**
**ಲಕ್ಷಲಕ್ಷ ದೀಪನೈಶ ಕೋಟಿಕಂಠ ಕೀರ್ತನಮ್ ।**
**ಶ್ರೀಮೃದಂಗ ತಾಲವಾದ್ಯ ನೃತ್ಯ ಕಾಜಿನಿಸ್ತರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೧೫॥**

ಚಾಂದಕಾಜಿಯೆಂಬ ಮ್ಲೇಚ್ಛ ರಾಜನು ಸಂಕೀರ್ತನೆಯ ಪ್ರಕ್ರಿಯೆಗೆ ಅಡ್ಡಿಪಡಿಸಿದಾಗ ಗೌರಸುಂದರನು ಸಹಸ್ರಾರು ದೀಪಗಳಿಂದ ಅಲಂಕೃತಗೊಂಡ, ಮೃದಂಗ, ಕರತಾಳ, ಮುಂತಾದ ಇತರ ಸಂಗೀತವಾದ್ಯಗಳ ಇಂಪಾದ ಧ್ವನಿಯೊಂದಿಗೆ ಲಕ್ಷಾಂತರ ಭಕ್ತರಿಂದೊಡಗೂಡಿ ರಾತ್ರಿಹೊತ್ತಿನಲ್ಲಿ ಶ್ರೀಕೃಷ್ಣನ ದಿವ್ಯನಾಮಗಳನ್ನು ಹಾಡುತ್ತಾ ನರ್ತಿಸುವ, ಇರುಳು ಸಂಕೀರ್ತನೆಯನ್ನು ನಿರ್ದೇಶಿಸಿ ತನ್ನ ಭಕ್ತರ ಹೃದಯದಲ್ಲಿದ್ದ ಭೀತಿಯನ್ನು ನಿವಾರಿಸಿದನು. ಅರಸ ಕಾಜಿಯನ್ನು ವಿನಮ್ರಗೊಳಿಸಿ ಕಟ್ಟಕಡೆಗೆ ಅವನ ಹೃದಯವನ್ನು ಗೆದ್ದುಕೊಂಡನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೧೬

**ಲಕ್ಷ ಲೋಚನಾಶ್ರುವರ್ಷ ಹರ್ಷ ಕೇಶಕರ್ತನಮ್**
**ಕೋಟಿಕಂಠ ಕೃಷ್ಣಕೀರ್ತನಾಢ್ಯ ದಂಡ ಧಾರಣಮ್ ।**
**ನ್ಯಾಸಿವೇಷ ಸರ್ವದೇಶ ಹಾಹುತಾಶ ಕಾತರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೧೬॥**

ದುಃಖದ ಕಣ್ಣೀರನ್ನು ಹರಿಸುತ್ತಿದ್ದ ಲಕ್ಷಾಂತರ ಜನರ ಮಧ್ಯದಲ್ಲಿ ತನ್ನ ಸುಂದರವಾದ ದೀರ್ಘ ಕೇಶರಾಶಿಯನ್ನು ಹರುಷದಿಂದ ಕತ್ತರಿಸಿಕೊಂಡು ಸಂನ್ಯಾಸವನ್ನು ಸ್ವೀಕರಿಸಿದನು. ಅವನು ಸಂನ್ಯಾಸದಂಡವನ್ನು ಸ್ವೀಕರಿಸುತ್ತಿದ್ದಂತೆ ಲಕ್ಷಾಂತರ ಜನರು ಕೃಷ್ಣಕೀರ್ತನೆಗಳನ್ನು ಹಾಡುತ್ತಿದ್ದರು. ಅನಂತರ ಎಲ್ಲಾ ಪ್ರದೇಶದ ಜನರು ಅವನನ್ನು ಸಂನ್ಯಾಸವೇಷದಲ್ಲಿ ನೋಡಿ ದುಃಖದಿಂದ ಹತಾಶರಾಗಿ ಅಳಹತ್ತಿದರು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೧೭

**ಶ್ರೀಯತೀಶ ಭಕ್ತವೇಷ ರಾಢದೇಶ ಚಾರಣಮ್**
**ಕೃಷ್ಣಚೈತನ್ಯಾಖ್ಯ ಕೃಷ್ಣನಾಮ ಜೀವತಾರಣಮ್ ।**
**ಭಾವ ವಿಭ್ರಮಾತ್ಮ ಮತ್ತ ಧಾವಮಾನ ಭೂಧರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೧೭॥**

ಎಲ್ಲ ಯೋಗಗಳ ಒಡೆಯನಾಗಿದ್ದು, ಒಬ್ಬ ಭಕ್ತನಂತೆ ರಾಢದೇಶ ಎಂದು ಕರೆಯಲ್ಪಡುವ ಬಂಗಾಳಪ್ರದೇಶದಲ್ಲಿ ತನ್ನ ಪಾದಕಮಲಗಳಿಂದ ಆ ನೆಲವನ್ನು ಪವಿತ್ರಗೊಳಿಸುತ್ತಾ ಸಂಚರಿಸಿದನು.

ಈಗ ಅವನು ಶ್ರೀಕೃಷ್ಣಚೈತನ್ಯ ಎಂಬ ಹೆಸರಿನಿಂದ ತಿಳಿಯಲ್ಪಟ್ಟು ಎಲ್ಲಾ ಪತಿತ ಬದ್ಧಾತ್ಮರನ್ನು ಶ್ರೀಕೃಷ್ಣನ ದಿವ್ಯನಾಮಗಳ ಮೂಲಕ ಉದ್ಧರಿಸಿದನು. ಪ್ರೇಮಾನಂದಭರಿತ ದಿವ್ಯ ಭಾವನೆಗಳಿಂದ ಮತ್ತನಾದ ಅವನು ಭೂಮಿಯೆಲ್ಲೆಡೆ ಚಿತ್ತಭ್ರಮಣೆಗೊಂಡವನಂತೆ ಓಡುತ್ತಿದ್ದನು. ಅವನ ರೂಪವು ಹೊನ್ನಿನ ಪರ್ವತದಂತೆ ಗೋಚರಿಸುತ್ತಿತ್ತು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೧೮

**ಶ್ರೀಗದಾಧರಾದಿ ನಿತ್ಯಾನಂದ ಸಂಗ ವರ್ಧನಮ್**
**ಅದ್ವಯಾಖ್ಯ ಭಕ್ತಮುಖ್ಯ ವಾಂಛಿತಾರ್ಥ ಸಾಧನಮ್ ।**
**ಕ್ಷೇತ್ರವಾಸ ಸಾಭಿಲಾಷ ಮಾತೃತೋಷ ತತ್ಪರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೧೮॥**

ಶ್ರೀ ಗದಾಧರಪಂಡಿತ ಹಾಗೂ ಶ್ರೀ ನಿತ್ಯಾನಂದಪ್ರಭುವಿನಂಥ ಶ್ರೇಷ್ಠ ವ್ಯಕ್ತಿಗಳ ಉಪಸ್ಥಿತಿಯಿಂದಾಗಿ ಅವನ ಭಕ್ತರ ಸಂಗದ ಪ್ರತಿಷ್ಠೆಯು ಇನ್ನೂ ಹೆಚ್ಚಿತು. ಭಕ್ತರಲ್ಲಿ ಅಗ್ರಗಣ್ಯರಾದ ಶ್ರೀ ಅದ್ವೈತ ಆಚಾರ್ಯರ ಬಯಕೆಯನ್ನು ಈಡೇರಿಸಲು ಶ್ರೀಚೈತನ್ಯದೇವನು ಈ ಧರೆಯಮೇಲೆ ಅವತರಿಸಿದನು. ತನ್ನ ಮಾತೆಯನ್ನು ಸಂತುಷ್ಟಿಗೊಳಿಸಲು ತಾನು ಅವರಿಂದ ತುಂಬಾದೂರ ಹೋಗದೇ ಪುರುಷೋತ್ತಮ ಕ್ಷೇತ್ರ ಶ್ರೀ ಜಗನ್ನಾಥಪುರಿಯಲ್ಲಿ ನೆಲೆಸುವುದಾಗಿ ಅವರಿಗೆ ಭಾಷೆಯಿತ್ತನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೧೯

**ನ್ಯಾಸಿರಾಜ ನೀಲಶೈಲವಾಸ ಸರ್ವಭೌಮಪಮ್**
**ದಾಕ್ಷಿಣಾತ್ಯ ತೀರ್ಥಜಾತ ಭಕ್ತಕಲ್ಪ ಪಾದಪಮ್ ।**
**ರಾಮಮೇಘ ರಾಗಭಕ್ತಿ ವೃಷ್ಟಿಶಕ್ತಿ ಸಂಚರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೧೯॥**

ಸಂನ್ಯಾಸಿಗಳ ಒಡೆಯ ಶ್ರೀಚೈತನ್ಯ ದೇವನು ನೀಲಾಚಲ(ಜಗನ್ನಾಥಪುರಿ)ವನ್ನು ತಲುಪಿ ಮೊತ್ತಮೊದಲಿಗೆ ವೇದಾಂತದ ಪ್ರಖ್ಯಾತ ಪಂಡಿತರಾದ ವಾಸುದೇವ ಸಾರ್ವಭೌಮರನ್ನು ಉದ್ಧರಿಸಿದನು ಮತ್ತು ತರುವಾಯ ಇನ್ನೂ ಬೇರೆ ಬೇರೆ ಸಿದ್ಧಾಂತಗಳ ಹಲವು ಅನುಯಾಯಿಗಳಿದ್ದ ದಕ್ಷಿಣ ಭಾರತದೆಡೆ ಪ್ರಯಾಣಿಸಿದನು. ಅಲ್ಲಿ ಹಲವು ಪುಣ್ಯಕ್ಷೇತ್ರಗಳಲ್ಲಿ ನೆಲೆಸಿದ್ದ ಭಕ್ತರೆಲ್ಲರ ಆಶಯಗಳನ್ನು ಕಲ್ಪವೃಕ್ಷದಂತೆ ಈಡೇರಿಸಿದನು. ಅಲ್ಲಿ ಅವನು ಭಕ್ತಿಮಾರ್ಗದ ಮಳೆಯಮೇಘದಂತಿದ್ದ ರಾಮಾನಂದರಾಯನನ್ನು ಭೇಟಿಮಾಡಿ ಶ್ರೀವೃಂದಾವನದ ಸ್ವಯಂಪ್ರೇರಿತ ಪ್ರೇಮಪೂರ್ವಕ ಭಕ್ತಿಸೇವೆಯ ಮಾರ್ಗವಾದ ರಾಗಭಕ್ತಿಯ ರಸವನ್ನು ಎಲ್ಲೆಡೆಯೂ ಸುರಿಸಲು ಅನುವಾಗುವಂತೆ ಅವನನ್ನು ಶಕ್ತಗೊಳಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೨೦

**ಧ್ವಸ್ತ ಸಾರ್ವಭೌಮವಾದ ನವ್ಯತರ್ಕ ಶಂಕರಮ್**
**ಧ್ವಸ್ತ ತದ್ವಿವರ್ತವಾದ ದಾನವೀಯ ಡಂಬರಮ್ ।**
**ದರ್ಶಿತಾರ್ಥ ಸರ್ವಶಾಸ್ತ್ರ ಕೃಷ್ಣಭಕ್ತಿ ಮಂದಿರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨೦॥**

ವೇದಗಳ ನೈಜಸಿದ್ಧಾಂತಗಳನ್ನು ವರ್ಣಿಸುವ ಅವನ ಮೂಲ ಹಾಗೂ ನಿತ್ಯನೂತನ ವಾದಗಳು ಕ್ಷುದ್ರ ಹಾಗೂ ದಾನವೀಯ ಮನೋಭಾವನೆಗಳಿಂದ ಪ್ರೇರಿತ ಜಂಭದ ವ್ಯಕ್ತಿಗಳಿಂದ ಬೆಂಬಲಿಸಲ್ಪಡುವ ವಿವರ್ತವಾದವೆಂದು ಕರೆಯಲ್ಪಡುವ ಶಂಕರಾಚಾರ್ಯರ ನಿರಾಕಾರ ಹಾಗೂ ನಾಸ್ತಿಕವಾದಗಳನ್ನು ಸಂಸ್ಥಾಪಿಸಲು ಸಾರ್ವಭೌಮರು ಛಲ, ವಿತಂಡ, ನಿಗ್ರಹ ಎಂಬಿತ್ಯಾದಿ ವಿವಿಧ ತಂತ್ರಗಳ ಮೂಲಕ ಮತ್ತೆ ಮತ್ತೆ ಮಾಡಿದ ಎಲ್ಲಾ ಪ್ರಯತ್ನಗಳನ್ನು ಧ್ವಂಸಗೊಳಿಸಿದವು. ಅದಕ್ಕೆ ಬದಲಾಗಿ, ವೇದಿಕ ಸಾಹಿತ್ಯಗಳ ಸಮಗ್ರ ಸಂಕೀರ್ಣವು ಕೃಷ್ಣಭಕ್ತಿಯಿಂದ ಸ್ಥಾಪಿಸಲ್ಪಟ್ಟ ಮಂದಿರವೆಂದು ಪರಿಗಣಿಸತಕ್ಕದ್ದು ಎಂದು ಬೋಧಿಸಿದನು. ಶುದ್ಧಪ್ರೇಮದ ಐಕ್ಯೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೨೧

**ಪ್ರೇಮಧಾಮ ದಿವ್ಯದೀರ್ಘದೇಹ ದೇವನಂದಿತಮ್**
**ಹೇಮಕಂಜ ಪುಂಜನಿಂದಿ ಕಾಂತಿಚಂದ್ರವಂದಿತಮ್ ।**
**ನಾಮಗಾನನೃತ್ಯನವ್ಯ ದಿವ್ಯಭಾವಮಂದಿರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨೧॥**

ದಿವ್ಯಪ್ರೇಮದ ಧಾಮವಾದ ಅವನ ದೀರ್ಘ ಸುಂದರ ದೇಹವು ದೇವತೆಗಳ ಆನಂದವನ್ನು ವರ್ಧಿಸುತ್ತಿರುತ್ತದೆ. ಚಂದಿರನ ಕಾಂತಿಯಿಂದಲೂ ಮನೋಹರವಾದ ಅವನ ಹೊಳೆಯುವ ದೇಹವು ನೂರಾರು ಕಮಲಗಳ ಅಂದವನ್ನು ನಾಚಿಸುವಂತಿದೆ. ಶ್ರೀಕೃಷ್ಣನ ನಾಮಗಳನ್ನು ಹಾಡಿನರ್ತಿಸುವಾಗ ಉತ್ಪಾದನೆಯಾಗುವ ದಿವ್ಯ ಸದ್ಗುಣ ಮತ್ತು ಪ್ರೇಮಮಯ ಆನಂದದ ನಿತ್ಯನೂತನ ಭಾವಗಳ ಮೂರ್ತರೂಪ ಅವನಾಗಿದ್ದಾನೆ. ಶುದ್ಧಪ್ರೇಮದ ಐಕ್ಯೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೨೨

**ಕೃಷ್ಣಕೃಷ್ಣ ಕೃಷ್ಣಕೃಷ್ಣ ಕೃಷ್ಣನಾಮ ಕೀರ್ತನಮ್**
**ರಾಮರಾಮಗಾನರಮ್ಯ ದಿವ್ಯಚಂದನರ್ತನಮ್ ।**
**ಯತ್ರತತ್ರ ಕೃಷ್ಣನಾಮ ದಾನ ಲೋಕನಿಸ್ತರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨೨॥**

ಅವನ ದಕ್ಷಿಣಭಾರತ ಯಾತ್ರೆಯ ನೈಜ ಉದ್ದೇಶವು ಆ ಪ್ರಾಂತ್ಯದ ಎಲ್ಲಾ ನಿವಾಸಿಗಳನ್ನು ಉದ್ಧರಿಸುವುದಾಗಿತ್ತು. ರಸ್ತೆ ಬದಿಗಳಲ್ಲಿ, ದೇವಾಲಯಗಳಲ್ಲಿ, ಪವಿತ್ರಸ್ಥಳಗಳಲ್ಲಿ ಹಾಗೂ ಎಲ್ಲೆಂದರಲ್ಲಿ

ಅವನು ಕೃಷ್ಣ, ಕೃಷ್ಣ, ಕೃಷ್ಣ, ಕೃಷ್ಣ, ಕೃಷ್ಣ, ಕೃಷ್ಣ, ಕೃಷ್ಣ ಹೇ! ಎಂದು ಸವಿಯಾದಧ್ವನಿಯಲ್ಲಿ ರಾಗವಾಗಿ ಹಾಡುತ್ತಾ ನರ್ತಿಸುತ್ತಿದ್ದನು. ಕೆಲವೊಮ್ಮೆ ಅವರ್ಣನೀಯ ದಿವ್ಯಾನಂದದಲ್ಲಿ ಮೈಮರೆಯುವ ಅವನು ರಾಮ! ರಾಮ! ಎಂದು ಸವಿಯಾಗಿ ಹಾಡುತ್ತಾ ಆನಂದಾತಿಶಯದಿಂದ ಲಯಬದ್ಧವಾಗಿ ನರ್ತಿಸುವನು. ದೇಶ, ಕಾಲ, ಪರಿಸ್ಥಿತಿಗಳ ಪರಿವೆಯಿಲ್ಲದೇ ಶ್ರೀಕೃಷ್ಣನ ದಿವ್ಯನಾಮಗಳನ್ನು ಹಾಡಲು ಎಲ್ಲರನ್ನೂ ಉದಾರವಾಗಿ ಪ್ರೇರೇಪಿಸುತ್ತಾ ಅವರೆಲ್ಲರನ್ನು ಉದ್ಧರಿಸುತ್ತಿದ್ದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೨೩

**ಗೋದಾವರ್ಯ ವಾಮತೀರ ರಾಮಾನಂದ ಸಂವಾದಮ್**
**ಜ್ಞಾನಕರ್ಮ ಮುಕ್ತಮರ್ಮ ರಾಗಭಕ್ತಿ ಸಂಪದಮ್ ।**
**ಪಾರಕೀಯಕಾಂತ ಕೃಷ್ಣಭಾವ ಸೇವನಾಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨೩॥**

ಚೈತನ್ಯಚರಿತಾಮೃತದಲ್ಲಿ ರಾಮಾನಂದ ಸಂವಾದ ಎಂದು ತಿಳಿಯಲ್ಪಡುವ ರಾಮಾನಂದರಾಯನೊಂದಿಗಿನ ಪ್ರಸಿದ್ಧ ಸಂಭಾಷಣೆಯಲ್ಲಿ ಅವನು ಜ್ಞಾನ ಮತ್ತು ಕರ್ಮಗಳಿಂದ ಮುಕ್ತವಾದ ಸ್ವಯಂಪ್ರೇರಣೆಯಿಂದ ಶ್ರೀಕೃಷ್ಣನ ಪಾದಕಮಲಗಳನ್ನು ಪ್ರೇಮಪೂರ್ವಕವಾಗಿ ಭಕ್ತಿಯಿಂದ ಸೇವಿಸುವ ರಾಗಭಕ್ತಿಯೇ ಸರ್ವೋತ್ತಮವಾದ ಸಾಧನೆ ಮತ್ತು ಪಾರಕೀಯಪ್ರೇಮದ ಏಕೈಕ ಒಡೆಯನಾದ ಶ್ರೀಕೃಷ್ಣನೇ ಆನಂದಮಯ ಪ್ರೇಮಪೂರ್ವಕ ಸೇವೆಯನ್ನು ಸ್ವೀಕರಿಸುವ ಏಕೈಕ ಪ್ರಧಾನತತ್ತ್ವ ಮತ್ತು ಅದರ ಏಕೈಕ ಧ್ಯೇಯ ಎಂದು ನಿರ್ಣಯಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೨೪

**ದಾಸ್ಯಸಖ್ಯ ವಾತ್ಸಲ್ಯಕಾಂತ ಸೇವನೋತ್ತರೋತ್ತರಮ್**
**ಶ್ರೇಷ್ಠ ಪಾರಕೀಯ ರಾಧಿಕಾಂಘ್ರಿಭಕ್ತಿ ಸುಂದರಮ್ ।**
**ಶ್ರೀವ್ರಜಸ್ವಸಿದ್ಧ ದಿವ್ಯಕಾಮ ಕೃಷ್ಣತತ್ಪರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨೪॥**

ಒಬ್ಬನು ಭಗವಂತನ ಸೇವೆಯನ್ನು ದಾಸ್ಯದಿಂದ ಸಖ್ಯದ, ವಾತ್ಸಲ್ಯದಿಂದ ಮಾಧುರ್ಯದ ಔನ್ನತ್ಯಕ್ಕೆ ಮುನ್ನಡೆ ಸಾಧಿಸುವ ವಿವಿಧಸಂಬಂಧಗಳಿಂದ ಕೈಗೊಳ್ಳಬಹುದು ಮತ್ತು ಕಟ್ಟಕಡೆಯದಾಗಿ ವ್ರಜೇಂದ್ರನಂದನ ಶ್ರೀಕೃಷ್ಣನಲ್ಲಿ ಪಾರಕೀಯಪ್ರೇಮಭಾವವನ್ನು ಹೊಂದಿ ಶ್ರೀಮತಿ ರಾಧಾರಾಣಿಯ ಪಾದಕಮಲಗಳ ಭಕ್ತಿಸೇವೆಯನ್ನು ಕೈಗೊಳ್ಳುವುದೇ ಅತ್ಯಂತ ಸುಂದರ ಎಂದು ತೋರಿಸಿಕೊಟ್ಟನು. ದಿವ್ಯ ಮತ್ತು ಸ್ವಯಂಪ್ರೇರಿತ ಪ್ರೇಮಪೂರ್ವಕ ಆಶಯಗಳು ಪರಿಶುದ್ಧ ಮತ್ತು ನಿಷ್ಕಳಂಕ ರೂಪದಲ್ಲಿ ತಮ್ಮ ಪರಿಪೂರ್ಣ ಅರ್ಥವನ್ನು ವ್ರಜೇಂದ್ರನಂದನ ಶ್ರೀಕೃಷ್ಣನಲ್ಲಿ ಮಾತ್ರ ಕಾಣುತ್ತವೆ ಎಂಬ ತಿಳುವಳಿಕೆಯು ಗೌರಸುಂದರ ಶ್ರೀಮಾನ್ ಮಹಾಪ್ರಭುವಿನಿಂದ ಕೊಡಲ್ಪಟ್ಟಿತು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೨೫

**ಶಾಂತಮುಕ್ತ ಭೃತ್ಯತೃಪ್ತ ಮಿತ್ರಮತ್ತ ದರ್ಶಿತಮ್**
**ಸ್ನಿಗ್ಧಮುಗ್ಧ ಶಿಷ್ಟಮಿಷ್ಟ ಸುಷ್ಠುಕುಂಠ ಹರ್ಷಿತಮ್ ।**
**ತಂತ್ರಮುಕ್ತ ವಾಮ್ಯರಾಗ ಸರ್ವ ಸೇವನೋತ್ತರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨೫॥**

ವಿಧೇಯತೆಯಿಂದ ಭಗವಂತನನ್ನು ಆರಾಧಿಸುವ ಭಕ್ತನು ದುಃಖದಿಂದ ಮುಕ್ತನಾಗುವ ಸಂತೋಷವನ್ನು ಅನುಭವಿಸುತ್ತಾನೆ, ಸೇವಾಭಾವದಲ್ಲಿರುವ ಭಕ್ತನು ಸೇವೆಮಾಡಿದ ತೃಪ್ತಿಯಿಂದ ಸಿಗುವ ಸಂತೋಷವನ್ನು ಅನುಭವಿಸುತ್ತಾನೆ. ಸ್ನೇಹಭಾವದಿಂದ ಭಗವಂತನನ್ನು ಸೇವಿಸುವ ಭಕ್ತನು ನೇರವಾಗಿ ಭಗವಂತನ ಆಶ್ರಯದಲ್ಲಿ ಅವನ ಸೇವೆಯ ಆನಂದವನ್ನು ಹೊಂದಿದರೆ, ವಾತ್ಸಲ್ಯಭಾವದಲ್ಲಿ ಭಗವಂತನನ್ನು ಸೇವಿಸುವ ಭಕ್ತನು ಭಗವಂತನನ್ನು ಮಗನಂತೆ ಪ್ರೀತಿಸುತ್ತಾ ತೀವ್ರವಾದ ಮಮತೆಯನ್ನು ತೋರಿ ಆನಂದವನ್ನು ಅನುಭವಿಸುತ್ತಾನೆ ಎಂದು ಅವನು ವಿವರಿಸಿದನು. ಇನ್ನೂ ಮುಂದಕ್ಕೆ ವಿವರಿಸುತ್ತಾ ಸ್ವಕೀಯ ಮಾಧುರ್ಯರಸದಲ್ಲಿ ಭಗವಂತನನ್ನು ಸೇವಿಸುವ ಭಕ್ತರು ಶಾಸ್ತ್ರವಿಧಿತ ಆದೇಶಗಳಿಗೆ ಬದ್ಧರಾಗಿರುವುದರಿಂದ ಅವರು ಅನುಭವಿಸುವ ಮಾಧುರ್ಯರಸದ ಆನಂದವು ಮಾಧುರ್ಯದ ಸಂಪೂರ್ಣ ಪೋಷಣೆಗೆ ಮತ್ತು ಅದರ ಅಮೃತದಂಥ ಸವಿಗೆ ಮಾತ್ರ ಸೀಮಿತವಾಗಿರುತ್ತದೆ; ಅದಾಗ್ಯೂ, ಮಾಧುರ್ಯರಸದ ಸೇವೆಯು ಶಾಸ್ತ್ರವಿಧಿತ ನಿಯಮಗಳಿಂದ ಮುಕ್ತವಾಗಿದ್ದು ವ್ರಜಧಾಮದ ಪಾರಕೀಯ ಪ್ರೇಮಪೂರ್ವಕ ಭಾವದಲ್ಲಿ ವಿಶೇಷವಾಗಿ ವಾಮ್ಯರಾಗದಲ್ಲಿ ನೆರವೇರಿಸಲ್ಪಟ್ಟಾಗ ಅದು ಶ್ರೀಕೃಷ್ಣನಿಗೆ ಅತ್ಯುನ್ನತ ಆನಂದವನ್ನು ನೀಡುತ್ತದೆ ಎಂದು ಹೇಳಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೨೬

**ಆತ್ಮನವ್ಯ ತತ್ತ್ವದಿವ್ಯ ರಾಯಭಾಗ್ಯ ದರ್ಶಿತಮ್**
**ಶ್ಯಾಮಗೋಪ ರಾಧಿಕಾಪ್ತ ಕೋಕ್ತಗುಪ್ತ ಚೇಷ್ಟಿತಮ್ ।**
**ಮೂರ್ಛಿತಾಂಘ್ರಿ ರಾಮರಾಯ ಬೋಧಿತಾತ್ಮ ಕಿಂಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨೬॥**

ಭಾಗ್ಯಶಾಲಿ ರಾಮರಾಯನಿಗೆ ಮಹಾಪ್ರಭುವು ತನ್ನ ನಿತ್ಯನೂತನ ದಿವ್ಯಲೀಲೆಗಳನ್ನು ನೆರವೇರಿಸಲು ತಾನು ಹೇಗೆ ಅವತರಿಸಿದ್ದೇನೆ ಎಂದು ಪ್ರಕಟಪಡಿಸಿದನು. ತನ್ನ ಕಣ್ಣಮುಂದೆ ಮಹಾಪ್ರಭುವು ಗೋಪಾಲಬಾಲ ಶ್ಯಾಮಸುಂದರನಾಗಿ, ಶ್ರೀಮತಿ ರಾಧಾರಾಣಿಯ ಪ್ರೇಮಭಾವ ಮತ್ತು ಅಪ್ರತಿಮ ಸೌಂದರ್ಯದೊಡನೆ ಪ್ರಕಟನಾದಾಗ ರಾಮರಾಯನು ಪ್ರಜ್ಞೆತಪ್ಪಿ ಶ್ರೀ ಮಹಾಪ್ರಭುವಿನ ಪಾದಕಮಲಗಳಮೇಲೆ ಬಿದ್ದುಹೋದನು. ಮಹಾಪ್ರಭುವು ಕರುಣೆಯಿಂದ ತನ್ನ ಶರಣಾಗತ ನಿತ್ಯ ಕಿಂಕರನ ಪ್ರಜ್ಞೆಯು ಮರಳುವಂತೆ ಮಾಡಿ ಅವನನ್ನು ಹರಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೨೭

**ನಷ್ಟಕುಷ್ಠ ಕೂರ್ಮವಿಪ್ರ ರೂಪಭಕ್ತಿ ತೋಷಣಮ್**
**ರಾಮದಾಸ ವಿಪ್ರಮೋಹ ಮುಕ್ತಭಕ್ತ ಪೋಷಣಮ್ ।**
**ಕಾಲಕೃಷ್ಣದಾಸ ಮುಕ್ತ ಭಟ್ಟಥಾರಿ ಪಿಂಜರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨೭॥**

ಶ್ರೀ ಜಗನ್ನಾಥಪುರಿಯ ಹತ್ತಿರದ ಕೂರ್ಮಕ್ಷೇತ್ರದಲ್ಲಿ ಕುಷ್ಠರೋಗಪೀಡಿತನಾಗಿದ್ದ ಒಬ್ಬ ಬ್ರಾಹ್ಮಣಭಕ್ತನನ್ನು ಮಹಾಪ್ರಭುವು ಆತ್ಮೀಯತೆಯಿಂದ ಆಲಿಂಗಿಸಿ ಅವನರೋಗವು ನಿವಾರಣೆಯಾಗುವಂತೆ ಮಾಡಿ ಅವನಿಗೆ ಸುಂದರವಾದ ದೇಹವನ್ನು ಪ್ರದಾನಿಸಿದನು. ತನ್ನ ಆರಾಧ್ಯ ದೇವಿಯಾದ ಸೀತಾಮಾತೆಯು ರಾಕ್ಷಸನಿಂದ ಸ್ಪರ್ಶಿಸಲ್ಪಟ್ಟಳು ಎಂಬ ತಪ್ಪುಕಲ್ಪನೆಯಲ್ಲಿದ್ದ ರಾಮದಾಸ ಎಂಬ ಬ್ರಾಹ್ಮಣನ ಭಯ ಮತ್ತು ಮೋಹಗಳನ್ನು ಕೂರ್ಮಪುರಾಣವನ್ನು ಉಲ್ಲೇಖಿಸಿ ನಿವಾರಿಸಿದನು. ಆ ಮೂಲಕ ಪಾರಮಾರ್ಥಿಕ ತತ್ತ್ವವು ಎಲ್ಲಾ ಭೌತಿಕ ಕುಲುಷಿತತೆಯನ್ನು ಮೀರಿದ್ದು ಎಂದು ತೋರಿಸಿಕೊಟ್ಟು ಅವನಿಗೆ ಶುದ್ಧಭಕ್ತಿಯನ್ನು ಪ್ರದಾನಿಸಿದನು. ಭಟ್ಟಥಾರಿ ಎಂಬ ಮಲಬಾರಿನ ಕುಪ್ರಸಿದ್ಧ ಪಂಗಡದ ವಶದಲ್ಲಿದ್ದ ಕಾಲಕೃಷ್ಣದಾಸ ಎಂಬ ಅಜ್ಞಾನಿ ಬ್ರಾಹ್ಮಣನನ್ನು ಮಾಯೆಯ ಬಂಧನದಿಂದ ಕಾಪಾಡಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೨೮

**ರಂಗನಾಥಭಟ್ಟ ಭಕ್ತಿ ತುಷ್ಟಭಂಗಿ ಭಾಷಣಮ್**
**ಲಕ್ಷ್ಮ್ಯಗಮ್ಯ ಕೃಷ್ಣರಾಸ ಗೋಪಿಕೈಕ ಪೋಷಣಮ್ ।**
**ಲಕ್ಷ್ಮ್ಯಭೀಷ್ಟ ಕೃಷ್ಣಶೀರ್ಷ ಸಾಧ್ಯ ಸಾಧನಾಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨೮॥**

ಲಕ್ಷ್ಮೀನಾರಾಯಣನ ಆರಾಧನೆಯೇ ಮಾನವನ ಕಟ್ಟಕಡೆಯ ಧ್ಯೇಯ ಎಂದು ವೈಷ್ಣವರು ದೃಢವಾಗಿ ನಂಬುವ ಕ್ಷೇತ್ರವಾದ ಕಾವೇರಿ ನದಿತೀರದಲ್ಲಿ ಸ್ಥಾಪಿತವಾಗಿರುವ ಶ್ರೀರಂಗಕ್ಷೇತ್ರದಲ್ಲಿ ವ್ಯೇಂಕಟಭಟ್ಟ ಎಂಬ ವೈಷ್ಣವನ ಸೇವೆಯಿಂದ ಸಂತುಷ್ಟಗೊಂಡ ಮಹಾಪ್ರಭುವು ತಮಾಷೆಗಾಗಿ ಎಂಬಂತೆ ಶ್ರೀಕೃಷ್ಣನ ರಾಸಲೀಲೆಗಳೆಲ್ಲವೂ ಗೋಪಿಯರಿಂದ ನಿರ್ವಹಿಸಲ್ಪಟ್ಟಿವೆ, ಬೆಂಬಲಿಸಲ್ಪಟ್ಟಿವೆ ಮತ್ತು ರಕ್ಷಿಸಲ್ಪಟ್ಟಿವೆ ಎಂದು ಉಪದೇಶಿಸಿದನು. ಮತ್ತು ಎಲ್ಲರ ಅಭೀಷ್ಟಗಳ ಕಟ್ಟಕಡೆಯ ಧ್ಯೇಯವು ಶ್ರೀಕೃಷ್ಣನಾಗಿರುವುದರಿಂದ ಲಕ್ಷ್ಮೀದೇವಿಯೂ ಕೂಡಾ ಅವನಿಂದ ಆಕರ್ಷಿತಳಾಗಿರುತ್ತಾಳೆ ಎಂದು ಹೇಳಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೨೯

**ಬ್ರಹ್ಮಸಂಹಿತಾಖ್ಯ ಕೃಷ್ಣಭಕ್ತಿಶಾಸ್ತ್ರ ದಾಯಕಮ್**
**ಕೃಷ್ಣಕರ್ಣ ಸೀಧುನಾಮ ಕೃಷ್ಣಕಾವ್ಯ ಗಾಯಕಮ್ ।**
**ಶ್ರೀಪ್ರತಾಪರುದ್ರರಾಜ ಶೀರ್ಷಸೇವ್ಯ ಮಂದಿರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨೯॥**

ಶ್ರೀಕೃಷ್ಣಭಕ್ತಿಯ ಎಲ್ಲಾ ನಿರ್ಣಯಗಳನ್ನು ಸಮಗ್ರವಾಗಿ ಹೊಂದಿರುವ ಬ್ರಹ್ಮಸಂಹಿತೆಯನ್ನು ತನ್ನ ಭಕ್ತರಿಗೆ ಅವನು ಪ್ರದಾನಿಸಿದನು. ಶ್ರೀಕೃಷ್ಣನ ವ್ರಜಧಾಮದ ಲೀಲೆಗಳನ್ನು ವಿವರಿಸುವ ದಕ್ಷಿಣಭಾರತದ ಕವಿ ಬಿಲ್ವಮಂಗಳಠಾಕೂರರು ರಚಿಸಿದ ಕೃಷ್ಣಕರ್ಣಾಮೃತದ ಶ್ಲೋಕಗಳನ್ನು ಮಹಾಪ್ರಭುವು ಪ್ರೀತಿಯಿಂದ ಹಾಡಿದನು. ರಾಜ ಪ್ರತಾಪರುದ್ರನು ಮಹಾಪ್ರಭುವಿನ ಪಾದಕಮಲಗಳಿಗೆ ತಲೆಬಾಗಿ ನಮಸ್ಕರಿಸಿ ಅವನ ಪಾದಕಮಲಗಳನ್ನು ತನ್ನ ಶಿರದ ಮೇಲಿರಿಸಿಕೊಂಡನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೩೦

**ಶ್ರೀರಥಾಗ್ರ ಭಕ್ತಗೀತ ದಿವ್ಯನರ್ತನಾದ್ಭುತಮ್**
**ಯಾತ್ರಿಪಾತ್ರಮಿತ್ರರುದ್ರರಾಜ ಹೃಚ್ಚಮತ್ಕೃತಮ್ ।**
**ಗುಂಡಿಚಾಗಮಾದಿತತ್ತ್ವ ರೂಪಕಾವ್ಯ ಸಂಚರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೩೦॥**

ಜಗನ್ನಾಥಪುರಿಯ ರಥಯಾತ್ರೆಯ ಸಮಯದಲ್ಲಿ ರಥದಮುಂದೆ ಸಂಕೀರ್ತನೆಯಲ್ಲಿ ಮಗ್ನರಾಗಿದ್ದ ಭಕ್ತವೃಂದದಮಧ್ಯೆ ಮಹಾಪ್ರಭುವು ಅದ್ಭುತವಾಗಿ ನರ್ತಿಸುತ್ತಾ ನಟರಾಜನಂತೆ ಗೋಚರಿಸುತ್ತಿದ್ದನು, ಮತ್ತು ತನ್ನ ಮನಮೋಹಕ ನೃತ್ಯದಿಂದ ಅಲ್ಲಿ ನೆರೆದ ಯಾತ್ರಿಗಳ, ಶ್ರೀ ಪ್ರತಾಪರುದ್ರರಾಜನ ಸ್ನೇಹಿತರ ಮತ್ತು ಬಂಧುಬಳಗದವರ ಹೃನ್ಮನಗಳನ್ನು ಗೆದ್ದು ಅವರನ್ನು ವಿಸ್ಮಯಗೊಳಿಸಿದನು. ಅವನ ಶಕ್ತಿಯಿಂದ ಗುಂಡಿಚಾ ರಥಯಾತ್ರೆಯ ಲೀಲೆಯ ಸಹಜ ತಾತ್ಪರ್ಯವು ಶ್ರೀ ರೂಪಗೋಸ್ವಾಮಿಯವರು ರಚಿಸಿದ ಪದ್ಯದಲ್ಲಿ(ಪ್ರಿಯಃ ಸೋಯಮ್................ವಿಪಿನಾಯ ಹೃದಯತಿ)ಪ್ರಕಟವಾಯಿತು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೩೧

**ಪ್ರೇಮಮುಗ್ಧ ರುದ್ರರಾಜ ಶೌರ್ಯವೀರ್ಯ ವಿಕ್ರಮಮ್**
**ಪ್ರಾರ್ಥಿತಾಂಘ್ರಿವರ್ಜಿತಾನ್ಯ ಸರ್ವಧರ್ಮ ಸಂಗಮಮ್ ।**
**ಲುಂಠಿತ ಪ್ರತಾಪಶೀರ್ಷ ಪಾದಧೂಲಿ ಧೂಸರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೩೧॥**

ಮಹಾಪ್ರಭುವಿನ ಅಸಾಧಾರಣ ಗುಣಲಕ್ಷಣಗಳಿಂದ ಆಶ್ಚರ್ಯಚಕಿತನಾಗಿ ಮೂಕವಿಸ್ಮಿತನಾದ ಉತ್ಕಲದೇಶದರಾಜ ಪ್ರತಾಪರುದ್ರನು ತನ್ನ ಎಲ್ಲಾ ಅಧಿಕಾರವನ್ನು, ರಾಜವೈಭವವನ್ನು, ತನ್ನ

ಅನುಸರಿಸುತ್ತಿದ್ದ ಎಲ್ಲಾ ಧಾರ್ಮಿಕ ಸಿದ್ಧಾಂತಗಳನ್ನು ಮತ್ತು ಸಂಪ್ರದಾಯಗಳನ್ನು ಹಾಗೂ ಶೌರ್ಯವನ್ನು ತ್ಯಜಿಸಿ, ತನ್ನ ಮನಸ್ಸನ್ನು ಮಹಾಪ್ರಭುವಿನಲ್ಲಿ ಏಕಾಗ್ರಗೊಳಿಸಿ ಅವನಪಾದಕಮಲಗಳಮೇಲೆ ಬಿದ್ದು ಅವನ ಪಾದಧೂಳಿಯಿಂದ ತನ್ನ ಶಿರವನ್ನು ಅಲಂಕರಿಸಿಕೊಂಡನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

**ಶ್ಲೋಕ ೩೨**

**ದಾಕ್ಷಿಣಾತ್ಯ ಸುಪ್ರಸಿದ್ಧ ಪಂಡಿತೌಘ ಪೂಜಿತಮ್**
**ಶ್ರೇಷ್ಠರಾಜ ರಾಜಪಾತ್ರ ಶೀರ್ಷಭಕ್ತಿ ಭೂಷಿತಮ್ ।**
**ದೇಶಮಾತೃ ಶೇಷ ದರ್ಶನಾರ್ಥಿ ಗೌರ ಗೋಚರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೩೨॥**

ಮಹಾಪ್ರಭುವು ದಕ್ಷಿಣಭಾರತದಲ್ಲಿ ಸಂಚರಿಸುವಾಗ ಅಲ್ಲಿನ ಶ್ರೇಷ್ಠ ರಾಜರುಗಳು, ಮಂತ್ರಿಗಳು, ಪಂಡಿತರು ಹಾಗೂ ಅವರ ಬಂಧುಬಾಂಧವರು ಅವನನ್ನು ಗೌರವಿಸಿ ಸನ್ಮಾನಿಸಿದರು. ಅವನು ಅವರ ಭಕ್ತಿಯ ಚೂಡಾಮಣಿಯಾಗಿದ್ದನು. ತದನಂತರ ಸಂನ್ಯಾಸಧರ್ಮಕ್ಕನುಗುಣವಾಗಿ ಮಹಾಪ್ರಭುವು ತನ್ನ ಮಾತೆಯ, ಮಾತೃಭೂಮಿಯ ಮತ್ತು ತನ್ನ ತಾಯ್ನಾಡಾದ ಬಂಗಾಲದ ಕಡೆ ಪ್ರಯಾಣಬೆಳೆಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

**ಶ್ಲೋಕ ೩೩**

**ಗೌರಗರ್ವಿ ಸರ್ವಗೌಡ ಗೌರವಾರ್ಥ ಸಜ್ಜಿತಮ್**
**ಶಾಸ್ತ್ರಶಸ್ತ್ರ ದಕ್ಷದುಷ್ಟ ನಾಸ್ತಿಕಾದಿ ಲಜ್ಜಿತಮ್ ।**
**ಮುಖ್ಯಮಾನ ಮಾತೃಕಾದಿ ದೇಹಜೀವ ಸಂಚರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೩೩॥**

ಮಹಾಪ್ರಭುವಿನ ಖ್ಯಾತಿಯು ಎಲ್ಲೆಡೆಯೂ ಪಸರಿಸುತ್ತಿದ್ದಂತೆ, ಅವನ ಆಗಮನದ ಸುದ್ದಿಯನ್ನು ತಿಳಿದ ಬಂಗಾಳದ ಜನರೆಲ್ಲ ಅವನಮೇಲಿನ ಅಪಾರ ಗೌರವದಿಂದ ಅವನನ್ನು ಅದ್ದೂರಿಯಾಗಿ ಸ್ವಾಗತಿಸಲು ಎಲ್ಲ ಸಿದ್ಧತೆಗಳನ್ನು ನಡೆಸತೊಡಗಿದರು. ಹೀಗೆ ಬಹುಸಂಖ್ಯೆಯಲ್ಲಿ ಬಂಗಾಲದ ಜನರೆಲ್ಲ ಅತಿಯಾದ ಪ್ರೇಮದಿಂದ ಮಹಾಪ್ರಭುವಿನ ಸ್ವಾಗತದ ಸಿದ್ಧತೆಯಲ್ಲಿ ತೊಡಗಿರುವುದನ್ನು ನೋಡಿ ಕೇವಲ ಬೆರಳೆಣಿಕೆಯ ಸಂಖ್ಯೆಯಲ್ಲಿಮಾತ್ರವಿದ್ದ ಜಂಭದ ನಾಸ್ತಿಕರು ತಮ್ಮ ಸಂಕುಚಿತ ಮನೋಭಾವಕ್ಕೆ ನಾಚಿಕೊಂಡರು. ತನ್ನ ಅಗಲಿಕೆಯ ನೋವಿನಿಂದ ಅತಿಯಾಗಿ ನೊಂದಿದ್ದ ತನ್ನ ತಾಯಿಯನ್ನು ಮತ್ತು ಇತರ ಭಕ್ತರನ್ನು ಮಹಾಪ್ರಭುವು ತನ್ನ ಆಗಮನದ ಸುದ್ದಿಯಿಂದ ಚೇತರಿಸಿಕೊಂಡು ಉಲ್ಲಸಿತರಾಗುವಂತೆ ಮಾಡಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೩೪

**ನ್ಯಾಸ ಪಂಚವರ್ಷಪೂರ್ಣ ಜನ್ಮಭೂಮಿ ದರ್ಶನಮ್**
**ಕೋಟಿಕೋಟಿ ಲೋಕಲುಬ್ಧ ಮುಗ್ಧದೃಷ್ಟಿ ಕರ್ಷಣಮ್ ।**
**ಕೋಟಿಕಂಠ ಕೃಷ್ಣನಾಮ ಘೋಷ ಭೇದಿತಾಂಬರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೩೪॥**

ಕೊನೆಗೂ, ಸನ್ಯಾಸಾಶ್ರಮದ ಐದು ವರ್ಷಗಳ ತರುವಾಯ ಗೌರಸುಂದರನು ತನ್ನ ತಾಯ್ನಾಡಾದ ಬಂಗಾಳಕ್ಕೆ ಮರಳಿದಾಗ ಲಕ್ಷಾಂತರ ಜನರು ಅವನ ದರುಶನಕ್ಕಾಗಿ ಧಾವಿಸಿದರು. ಪ್ರತಿಯೊಬ್ಬರ ಕಣ್ಮನಗಳನ್ನು ಆಕರ್ಷಿಸುವ ಮಹಾಪ್ರಭುವನ್ನು ಅವರೆಲ್ಲರೂ ತೀವ್ರವಾದ ಭಾವುಕತೆಯಿಂದ ಮತ್ತು ಕಾತರತುಂಬಿದ ಕಣ್ಣುಗಳಿಂದ ವೀಕ್ಷಿಸಿದರು. ಅಲ್ಲಿ ನೆರೆದ ಕೋಟ್ಯಂತರ ಜನರು ಮೊಲುಕು ಹಾಕುತ್ತಿದ್ದ ಹರಿನಾಮದ ಘೋಷವು ನಭೋಮಂಡಲವನ್ನು ಭೇದಿಸಿ ಎಲ್ಲಾದಿಕ್ಕುಗಳನ್ನೂ ಪಸರಿಸಿ ಪ್ರತಿಧ್ವನಿಸಿದಾಗ ಅಲ್ಲಿ ದೊಡ್ಡ ಗದ್ದಲದ ವಾತಾವರಣವುಂಟಾಯಿತು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೩೫

**ಆರ್ತಭಕ್ತ ಶೋಕಶಾಂತಿ ತಾಪಿಪಾಪಿ ಪಾವನಮ್**
**ಲಕ್ಷಕೋಟಿ ಲೋಕಸಂಗ ಕೃಷ್ಣಧಾಮ ಧಾವನಮ್ ।**
**ರಾಮಕೇಲಿ ಸಾಗ್ರಜಾತ ರೂಪ ಕರ್ಷಣಾದರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೩೫॥**

ದೀರ್ಘಕಾಲದಿಂದ ಅವನನ್ನು ನೋಡಲಾಗದೇ ಸಂತಾಪದಲ್ಲಿದ್ದ ಅವನ ಅಸಂಖ್ಯಾತ ಭಕ್ತರನ್ನು ಗೌರಸುಂದರನು ಶಾಂತಗೊಳಿಸಿ, ಹಲವು ಪಾಪಾತ್ಮರನ್ನು ಕ್ಷಮಿಸಿ ಪುನೀತಗೊಳಿಸಿ, ಚಾಪಾಲ ಗೋಪಾಲನಂತಹ ಅತ್ಯಂತ ದೀನರನ್ನು ಉದ್ಧರಿಸಿದ ನಂತರ, ಅಜ್ಞಾನದಿಂದ ಮುಕ್ತರಾದ ಅಸಂಖ್ಯಾತ ಹಿಂಬಾಲಕರೊಂದಿಗೆ ಶ್ರೀಕೃಷ್ಣನ ಧಾಮವಾದ ವೃಂದಾವನದೆಡೆಗೆ ಧಾವಿಸಿದನು. ದಾರಿಯಲ್ಲಿ ರಾಮಕೇಲಿ ಎಂಬ ಜಾಗದಲ್ಲಿ ಶ್ರೀರೂಪ ಮತ್ತು ಅವನ ಹಿರಿಯ ಸೋದರ ಶ್ರೀಸನಾತನ ಎಂಬುವರಿಂದ ಆಕರ್ಷಿತನಾಗಿ  ಅವರಲ್ಲಿ ತನ್ನ ಪ್ರೇಮಭಾವನೆಗಳನ್ನು ವ್ಯಕ್ತಪಡಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೩೬

**ವ್ಯಾಘ್ರ ವಾರಣೈಣ ವನ್ಯಜಂತು ಕೃಷ್ಣ ಗಾಯಕಮ್**
**ಪ್ರೇಮನೃತ್ಯ ಭಾವಮತ್ತ ಝಾಡಖಂಡ ನಾಯಕಮ್ ।**
**ದುರ್ಗ ವನ್ಯಮಾರ್ಗ ಭಟ್ಟ ಮಾತ್ರಸಂಗ ಸೌಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೩೬॥**

ಹೀಗೆಯೇ ಮುಂದುವರಿಯುತ್ತಾ ಮಹಾಪ್ರಭುವು ಝಾಡಖಂಡದ ಅರಣ್ಯದೊಳಗೆ ನಡೆದನು. ಅಲ್ಲಿ ಅವನು ಚಾಮತ್ಕಾರಿಕವಾಗಿ ವನ್ಯಜಂತುಗಳಾದ ಹುಲಿ, ಜಿಂಕೆ, ಆನೆಯಾದಿ ಎಲ್ಲಾ ಪ್ರಾಣಿಗಳು ಅವನೊಡನೆ ಹರಿನಾಮವನ್ನು ಹಾಡುತ್ತಾ ನರ್ತಿಸುವಂತೆ ಮಾಡಿದನು. ದಿವ್ಯಪ್ರೇಮದಿಂದ ಮನಮೋಹಕವಾಗಿ ನರ್ತಿಸುತ್ತಾ ಮತ್ತು ಆನಂದಾತಿಶಯದಿಂದ ಮಾಂದ್ಯನಾಗಿ ಮಹಾಪ್ರಭುವು ಅತಿದುರ್ಗಮವಾಗಿದ್ದ ಅರಣ್ಯಮಾರ್ಗದಲ್ಲಿ ಕೇವಲ ಬಲಭದ್ರ ಭಟ್ಟಾಚಾರ್ಯನೊಬ್ಬನನ್ನು ಮಾತ್ರ ಜೊತೆಮಾಡಿಕೊಂಡು ಮುಂದುವರಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೩೭

**ಗಾಂಗ ಯಾಮುನಾದಿ ಬಿಂದುಮಾಧವಾದಿ ಮಾನನಮ್**
**ಮಾಥುರಾರ್ತ ಚಿತ್ತ ಯಾಮುನಾಗ್ರ ಭಾಗ ಧಾವನಮ್ ।**
**ಸ್ಮಾರಿತ ವ್ರಜಾತಿತೀವ್ರ ವಿಪ್ರಲಂಭ ಕಾತರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೩೭॥**

ಗಂಗಾ ಮತ್ತು ಯಮುನಾ ನದಿಗಳ ದಡಗಳಮೇಲೆ ವಾರಣಾಸಿ ಮತ್ತು ಪ್ರಯಾಗಗಳಲ್ಲಿ ಹಲವು ಮಂದಿರಗಳಿಗೆ ಭೇಟಿಯಿತ್ತನು, ಬಿಂದುಮಾಧವ ಮತ್ತು ಅಲ್ಲಿನ ಇತರ ಅರ್ಚವಿಗ್ರಹಗಳಿಗೆ ಗೌರವಾದರಗಳಿಂದ ವಂದಿಸಿದನು. ಅಲ್ಲಿಂದ ಮಥುರೆಯನ್ನು ಸಂದರ್ಶಿಸಲು ಅತ್ಯಂತ ಉತ್ಸುಕನಾಗಿ ಯಮುನಾನದಿಯ ದಡದುದ್ದಕ್ಕೂ ಅದರ ಹರಿವನ್ನು ಅನುಸರಿಸುತ್ತಾ ಮಥುರಾ ಪಟ್ಟಣದತ್ತ ಧಾವಿಸಲು ಪ್ರಾರಂಭಿಸಿದನು. ವ್ರಜಲೀಲೆಯ ನೆನಪುಗಳು ಅವನಲ್ಲಿ ತಲೆದೋರುತ್ತಿದ್ದಂತೆ ಅವನು ವ್ರಜದ ತೀವ್ರ ವಿರಹದಲ್ಲಿ ಮುಳುಗಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೩೮

**ಮಾಧವೇಂದ್ರ ವಿಪ್ರಲಂಭ ಮಾಥುರೇಷ್ಟ ಮಾನನಮ್**
**ಪ್ರೇಮಧಾಮ ದೃಷ್ಟಕಾಮ ಪೂರ್ವಕುಂಜ ಕಾನನಮ್ ।**
**ಗೋಕುಲಾದಿ ಗೋಷ್ಠಗೋಪ ಗೋಪಿಕಾ ಪ್ರಿಯಂಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೩೮॥**

ಶ್ರೀಮತಿ ರಾಧಾರಾಣಿಯು ತನ್ನ ಪ್ರೀತಿಯ ಕೃಷ್ಣನು ತನ್ನನ್ನು ಬಿಟ್ಟು ಮಥುರೆಗೆ ಹೋದ ಅಗಲಿಕೆಯ ನೋವನ್ನು ಅನುಭವಿಸಿದ ಪರಿಯನ್ನು ಶ್ರೀ ಮಾಧವೇಂದ್ರ ಪುರೀಯವರು ತಾವು ರಚಿಸಿದ (“ಅಯಿದೀನ ದಯಾರ್ದ್ರನಾಥ .....ಕಿಮ್ಕರೋಮ್ಯಹಮ್”, ಮಥುರಾ ಮಥುರಾ......ಮಥುರಾ ಮಥುರಾ)ಗೀತೆಯ ಮೂಲಕ ಬಣ್ಣಿಸಿ ಆಸ್ವಾದಿಸಿದ ವಿಪ್ರಲಂಭ ಭಾವವನ್ನು ಅವನು ಆಸ್ವಾದಿಸಿದನು. ಕೊನೆಗೆ ಅವನ ಮುಂದೆ ವೃಂದಾವನವು ಗೋಚರಿಸಿದಾಗ ಅದನ್ನು ತನ್ನ ಕಣ್ಣುಗಳಲ್ಲಿ ತುಂಬಿಕೊಂಡು, ತಾನು ಹಿಂದೆ ತನ್ನ ಲೀಲೆಗಳನ್ನು ಮೆರೆದ ಸುಂದರ ಹೂದೋಟಗಳ ದೃಶ್ಯವನ್ನು ತನ್ನ ಹೃನ್ಮನಗಳು ತೃಪ್ತಿಗೊಳ್ಳುವಂತೆ ಅವುಗಳಲ್ಲಿ ಮುಳುಗಿಹೋದನು. ಅವನು ಅಲ್ಲಿನ ಹನ್ನೆರಡು ವನಗಳಲ್ಲಿ ಗೋಪಾಲಕರೊಂದಿಗೆ ಮತ್ತು ಗೋಪಿಕೆಯರೊಂದಿಗೆ ತನ್ನ ಆತ್ಮೀಯತೆಯ ಮತ್ತು ಪ್ರೇಮ ಪ್ರಸಂಗಗಳನ್ನು ಪ್ರದರ್ಶಿಸಿದ್ದನು.

ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೩೯

**ಪ್ರೇಮಗುಂಜನಾಲಿಪುಂಜ ಪುಷ್ಪಪುಂಜ ರಂಜಿತಮ್**
**ಗೀತನೃತ್ಯ ದಕ್ಷಪಕ್ಷಿ ವೃಕ್ಷಲಕ್ಷ ವಂದಿತಮ್ ।**
**ಗೋವೃಷಾದಿ ನಾದದೀಪ್ತ ಪೂರ್ವಮೋದ ಮೇದುರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೩೯॥**

ಅವನು ವೃಂದಾವನದ ಕಣಿವೆಗಳಲ್ಲಿ ಮುಂದುವರಿಯುತ್ತಿದ್ದಾಗ ದಾರಿಯುದ್ದಕ್ಕೂ ಅವನು ಹೋದಲ್ಲೆಲ್ಲಾ ಸುಂದರವಾದ ಹೂವುಗಳನ್ನು ಸುತ್ತುವರಿದ ದುಂಬಿಗಳು ಗುಂಯ್ಗುಡುತ್ತಾ ಅವನನ್ನು ಹಾಡಿ ಹೊಗಳುತ್ತಿದ್ದವು. ಗಾಯನದಲ್ಲಿ ಮತ್ತು ನೃತ್ಯದಲ್ಲಿ ನಿಪುಣ ಹಕ್ಕಿಗಳು ತಮ್ಮ ಗಾನನೃತ್ಯಗಳಿಂದ ಅವನನ್ನು ಗೌರವಿಸಿ ಆದರಿಸುವವು ಮತ್ತು ವೃಕ್ಷಜಾತಿಗಳೆಲ್ಲಾ ಅವನಿಗೆ ಬಾಗಿವಂದಿಸುವವು. ಅಲ್ಲಿಯ ಹಸುಕರುಗಳು ಮತ್ತು ಎತ್ತುಗಳು ಅವನನ್ನು ಹೇಗೆ ಪ್ರೀತಿಯಿಂದ ಕರೆಯುತ್ತಿದ್ದವು ಎಂದು ನೆನಪಾಗುತ್ತಿದ್ದಂತೆಯೇ ಅವನ ಹೃದಯದಲ್ಲಿ ಪ್ರೇಮವು ಉಕ್ಕಿಹರಿಯಲಾರಂಭಿಸುವುದು. ಈ ಮೂಲಕ ಮಹಾಪ್ರಭುವು ವೃಂದಾವನದಲ್ಲಿ ತಾನು ಹಿಂದೆ ಮೆರೆದ ಲೀಲೆಗಳನ್ನು ಆನಂದಾತಿಶಯದಿಂದ ಮೆಲೆಕು ಹಾಕುವನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೪೦

**ಪ್ರೇಮಬುದ್ಧ ರುದ್ಧಬುದ್ಧಿಮತ್ತ ನೃತ್ಯ ಕೀರ್ತನಮ್**
**ಪ್ಲಾವಿತಾಶ್ರು ಕಾಂಚನಾಂಗ ವಾಸ ಚಾತುರಂಗನಮ್ ।**
**ಕೃಷ್ಣಕೃಷ್ಣ ರಾವಭಾವ ಹಾಸ್ಯಲಾಸ್ಯ ಭಾಸ್ವರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೪೦॥**

ದಿವ್ಯಪ್ರೇಮದಲ್ಲಿ ಸಂಪೂರ್ಣವಾಗಿ ಮುಳುಗಿಹೋಗುವ ಅವನು ಬಾಹ್ಯಜಗತ್ತಿನ ತನ್ನ ಎಲ್ಲಾ ಸಂವೇದನೆಗಳನ್ನು ಕಳೆದುಕೊಳ್ಳುವನು ಮತ್ತು ಶ್ರೀಕೃಷ್ಣನ ದಿವ್ಯನಾಮಗಳನ್ನು ಹಾಡುತ್ತಾ ಸಾಕ್ಷಾತ್ ಹುಚ್ಚನಂತೆ ಕುಣಿಯುವನು. ಅವನ ಕಣ್ಣುಗಳಿಂದ ಸತತವಾಗಿ ಹರಿದ ಕಣ್ಣೀರು ಕರಗಿದ ಬಂಗಾರದಂಥ ಅವನ ರೂಪವನ್ನು ಮತ್ತು ಥಳಥಳನೆ ಹೊಳೆಯುವ ಅವನ ವಸ್ತ್ರಗಳನ್ನು ಸಂಪೂರ್ಣವಾಗಿ ತೋಯಿಸಿ ನೆಲದಮೇಲೆ ಬಿದ್ದು ಎಲ್ಲ ದಿಕ್ಕುಗಳಿಗೂ ಹರಿಯಿತು. ಮಹಾಭಾವದಲ್ಲಿ ಅವನು ಜೋರಾಗಿ ನಗಲಾರಂಭಿಸುವನು ಮತ್ತು ಅತಿಎತ್ತರದ ಧ್ವನಿಯಲ್ಲಿ ಕೃಷ್ಣಾ ! ಕೃಷ್ಣಾ ! ಎಂದು ಕಿರಿಚುವನು. ಈ ಮೂಲಕ ಅವನ ಸೌಂದರ್ಯದ ತೇಜಸ್ಸು ಹೆಚ್ಚುಹೆಚ್ಚಾಗಿ ಬೇರೆ ಬೇರೆ ರೂಪಗಳಲ್ಲಿ ಪ್ರದರ್ಶಿತವಾಯಿತು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೪೧

**ಪ್ರೇಮಮುಗ್ಧ ನೃತ್ಯ ಕೀರ್ತನಾಕುಲಾರಿಟಾಂತಿಕಮ್**
**ಸ್ನಾನಧನ್ಯ ವಾರಿಧಾನ್ಯ ಭೂಮಿಕುಂಡ ದೇಶಕಮ್ ।**
**ಪ್ರೇಮಕುಂಡ ರಾಧಿಕಾಖ್ಯ ಶಾಸ್ತ್ರ ವಂದನಾದರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೪೧॥**

ಹೀಗೆ ದಿವ್ಯಪ್ರೇಮದ ಪರಮಾನಂದದಲ್ಲಿ ಮೈಮರೆತ ಮಹಾಪ್ರಭುವು ಶ್ರೀಕೃಷ್ಣನ ಮಹಿಮೆಗಳನ್ನು ಹಾಡುತ್ತಾ, ನರ್ತಿಸುತ್ತಾ ಪವಿತ್ರ ಕೊಳವಾದ ಶ್ರೀರಾಧಾಕುಂಡವನ್ನು ಸಮೀಪಿಸಿದನು. ಭತ್ತದಗದ್ದೆಗಳ ನೀರಿನಲ್ಲಿ ಸ್ನಾನಮಾಡಿ ಅದನ್ನು ಪವಿತ್ರಗೊಳಿಸಿದನು. ಆ ಮೂಲಕ ಅದೇ ಸ್ಥಳವು ಶ್ರೀ ರಾಧಾಕುಂಡ ಎಂಬುದನ್ನು ಪ್ರಕಟಪಡಿಸಿದನು. ನಂತರ ಶಾಸ್ತ್ರಗಳಲ್ಲಿ ಕಂಡುಬರುವ ಪರಮಪುರುಷನ ರಾಣಿಯ ಹೆಸರಿನಿಂದ ನಾಮಾಂಕಿತಗೊಂಡ ಆ ಪ್ರೇಮಕುಂಡವನ್ನು ಹೊಗಳುವ ಮತ್ತು ಪ್ರಾರ್ಥಿಸುವ ಶ್ಲೋಕಗಳನ್ನು ದೈನ್ಯಭಾವದಿಂದ ಹಾಡಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೪೨

**ತಿಂತಿಡೀತಲಸ್ಥ ಯಾಮುನೋರ್ಮಿ ಭಾವನಾಪ್ಲುತಮ್**
**ನಿರ್ಜನೈಕ ರಾಧಿಕಾತ್ಮ ಭಾವ ವೈಭವಾವೃತಮ್ ।**
**ಶ್ಯಾಮ ರಾಧಿಕಾಪ್ತ ಗೌರ ತತ್ತ್ವ ಭಿತ್ತಿಕಾಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೪೨॥**

ವೃಂದಾವನದ ವಿವಿಧ ಲೀಲಾಸ್ಥಳಗಳನ್ನು ಸಂದರ್ಶಿಸುತ್ತಾ ಮಹಾಪ್ರಭುವು ದ್ವಾಪರಯುಗದಿಂದ ಅಸ್ತಿತ್ತ್ವದಲ್ಲಿರುವ ಪ್ರಖ್ಯಾತ ಹುಣಸೆಮರದ ಹತ್ತಿರ ಬಂದನು. ಆ ಮರದ ಕೆಳಗೆ ಕುಳಿತು ಯಮುನಾನದಿಯ ನರ್ತಿಸುತ್ತಿರವ ಅಲೆಗಳನ್ನು ನೋಡಿದಾಗ ಜಲಕ್ರೀಡೆಯ ನೆನಪು ಅವನಲ್ಲಿ ಉದ್ಭವಿಸಿತು, ಮತ್ತು ತಾನು ಗೋಪಿಯರೊಂದಿಗೆ ಗೌಪ್ಯವಾಗಿ ಜಲಕ್ರೀಡೆಯಾಡುತ್ತಿದ್ದ ತನ್ನ ಲೀಲೆಯಲ್ಲಿ ಮುಳುಗಿಹೋದನು. ಯಾವುದೇ ತಂಟೆಯಿಲ್ಲದ ಆ ನಿರ್ಜನಪ್ರದೇಶದಲ್ಲಿ ಮಹಾಪ್ರಭುವಿನ ಮೈಮನಗಳು ಶ್ರೀಮತಿ ರಾಧಾರಾಣಿಯ ನೆನಪಿನಿಂದ, ಸೌಂದರ್ಯದಿಂದ ಮತ್ತು ಮೋಹಕತೆಯಿಂದ ಆವರಿಸಲ್ಪಟ್ಟವು. ಈ ಸ್ಥಳದಲ್ಲಿ ಶ್ಯಾಮಸುಂದರನು ಶ್ರೀಮತಿ ರಾಧಾರಾಣಿಯ ಪ್ರೇಮಾನಂದಭಾವದಲ್ಲಿ ಸಂಪೂರ್ಣ ಮಗ್ನನಾಗಿದ್ದುದರಿಂದ ಈ ಸ್ಥಳವು ಗೌರತತ್ತ್ವದ ಮೂಲಸ್ಥಾನ ಎಂದು ಗುರುತಿಸಲ್ಪಟ್ಟಿದೆ. ಎಲ್ಲದಕ್ಕೂ ಮೂಲನಾಗಿರುವ ಶ್ರೀಮಾನ್ ಮಹಾಪ್ರಭುವು ಈ ಸ್ಥಳದಲ್ಲಿ ಶಾಶ್ವತವಾಗಿ ವಾಸವಾಗಿರುತ್ತಾನೆ. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೪೩

**ಶಾರಿಕಾ ಶುಕೋಕ್ತಿ ಕೌತುಕಾಢ್ಯ ಲಾಸ್ಯ ಲಾಪಿತಮ್**
**ರಾಧಿಕಾವ್ಯತೀತ ಕಾಮದೇವ ಕಾಮ ಮೋಹಿತಮ್ ।**
**ಪ್ರೇಮವಶ್ಯ ಕೃಷ್ಣಭಾವ ಭಕ್ತ ಹೃಚ್ಚಮತ್ಕೃತಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೪೩॥**

ಕಾಮದೇವನಾದ ಶ್ರೀಕೃಷ್ಣನು ಶ್ರೀಮತಿರಾಧಾರಾಣಿಯ ಅನುಪಸ್ಥಿತಿಯಲ್ಲಿ ಉತ್ಕಟವಾದ ಬಯಕೆಯಿಂದ ಗೊಂದಲದಲ್ಲಿದ್ದಾನೆ ಎಂದು ಬಣ್ಣಿಸುವ ಗಿಳಿ ಮತ್ತು ಅದರ ಪ್ರೇಯಸಿಯ ನಡುವಣ ಹಾಸ್ಯಮಯ ಮತ್ತು ಸ್ವಾರಸ್ಯಕರ ಸಂಭಾಷಣೆಗೆ ಅವನು ಮೂಲವಿಷಯವಾಗಿದ್ದನು. ಈ ಸಂಭಾಷಣೆಯ ಮೂಲಕ ಶುದ್ಧಪ್ರೇಮಕ್ಕೆ ಶ್ರೀಕೃಷ್ಣನು ಅಧೀನನಾಗುತ್ತಾನೆ ಎಂಬ ಅವನ ಸುಮಧುರ ವೈಶಿಷ್ಟ್ಯತೆಯನ್ನು ಮಹಾಪ್ರಭುವು ಪ್ರಚುರಪಡಿಸಿ ತನ್ನ ಭಕ್ತರ ಹೃದಯಗಳಲ್ಲಿ ವಿಸ್ಮಯವನ್ನುಂಟುಮಾಡಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೪೪

**ಶ್ರೀಪ್ರಯಾಗಧಾಮ ರೂಪ ರಾಗಭಕ್ತಿ ಸಂಚರಮ್**
**ಶ್ರೀ ಸನಾತನಾದಿ ಕಾಶಿ ಭಕ್ತಿ ಶಿಕ್ಷಣಾದರಮ್ ।**
**ವೈಷ್ಣವಾನುರೋಧಭೇದ ನಿರ್ವಿಶೇಷ ಪಂಜರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೪೪॥**

ಶ್ರೀ ಪ್ರಯಾಗಧಾಮದಲ್ಲಿ ಮಹಾಪ್ರಭುವು ಶ್ರೀವೃಂದಾವನದ ಭಾವವೇ ಪವಿತ್ರಪ್ರೇಮದ ಕಟ್ಟಕಡೆಯಹಂತ ಎಂಬ ರಾಗಭಕ್ತಿಮಾರ್ಗವನ್ನು ಅರ್ಥೈಸಿಕೊಳ್ಳಲು ಮತ್ತು ಅದರ ಅರ್ಥವನ್ನು ನಿರೂಪಿಸಲು ಶ್ರೀಲ ರೂಪಗೋಸ್ವಾಮಿಯವರನ್ನು ಶಕ್ತರನ್ನಾಗಿ ಮಾಡಿದನು. ಶ್ರೀ ಕಾಶಿಧಾಮದಲ್ಲಿ ಶ್ರೀಲ ಸನಾತನಗೋಸ್ವಾಮಿ ಮತ್ತು ಇತರ ಭಕ್ತರಿಗೆ ಶುದ್ಧಭಕ್ತಿಯ ಧ್ಯೇಯಗಳನ್ನು ಮತ್ತು ಸಾಧನೆಯನ್ನು ಬಹಳ ಆತ್ಮೀಯತೆಯಿಂದ ಬೋಧಿಸಿದನು. ಅಲ್ಲಿ ನೆರೆದಿದ್ದ ವೈಷ್ಣವರ ಬೇಡಿಕೆಯ ಮೇರೆಗೆ ಆತ್ಮಾರಾಧನೆಯಲ್ಲಿ ಅಂಧವಿಶ್ವಾಸವಿರಿಸಿದ್ದ ಸಂಕುಚಿತ ಮನೋಭಾವದ ಕಾಶಿಯ ನಿರಾಕಾರವಾದಿಗಳ ಹಠಮಾರಿತನದ ಪ್ರತಿಷ್ಠೆಯನ್ನು ನಾಶಗೊಳಿಸಿದನು, ಮತ್ತು ಅವರಿಗೆ ಪರಾತ್ಪರ ಸತ್ಯ – ಪರಬ್ರಹ್ಮನ ಭಕ್ತಿಯ ಸ್ವಾತಂತ್ರ್ಯವನ್ನು ಪ್ರದಾನಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೪೫

**ನ್ಯಾಸಿಲಕ್ಷನಾಯಕ ಪ್ರಕಾಶಾನಂದ ತಾರಕಮ್**
**ನ್ಯಾಸಿರಾಶಿ ಕಾಶಿವಾಸಿ ಕೃಷ್ಣನಾಮ ಪಾರಕಮ್ ।**
**ವ್ಯಾಸನಾರದಾದಿ ದತ್ತ ವೇದಧೀ ಧುರಂಧರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೪೫॥**

ಲಕ್ಷಾಂತರ ಮಾಯಾವಾದಿ ಸಂನ್ಯಾಸಿಗಳ ನಾಯಕನಾಗಿದ್ದ ಪ್ರಕಾಶಾನಂದಸರಸ್ವತಿಯನ್ನು ನಿರಾಕಾರತತ್ತ್ವದ ಕೂಪದಿಂದ ಉದ್ಧರಿಸಿದ ನಂತರ ಮೊದಲಿಗೆ ಸಂನ್ಯಾಸಿಗಳಾಗಿದ್ದ ಕಾಶಿನಿವಾಸಿಗಳ ಮೇಲೆ ಭಗವಾನ್ ಶ್ರೀಕೃಷ್ಣನ ದಿವ್ಯನಾಮಗಳನ್ನು ಅನುಗ್ರಹಿಸಿ ಅವರನ್ನು ಜನ್ಮಮೃತ್ಯುಗಳ ಸಾಗರದಿಂದ ರಕ್ಷಿಸಿದನು. ಮಹಾಪ್ರಭುವು ನಾರದ ಮತ್ತು ವ್ಯಾಸರ ಮೂಲಕ ಗುರುಶಿಷ್ಯಪರಂಪರೆಯಲ್ಲಿ ಹಸ್ತಾಂತರಗೊಂಡು ಹರಿದುಬರುವ ವೇದಸಾಹಿತ್ಯಗಳ ಮಧುರ ನಿರ್ಣಯಗಳ ರಥಕ್ಕೆ ಆಧ್ಯಾತ್ಮಿಕ ಬೆಂಬಲವಾಗಿದ್ದಾನೆ. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೪೬

**ಬ್ರಹ್ಮಸೂತ್ರ ಭಾಷ್ಯ ಕೃಷ್ಣ ನಾರದೋಪದೇಶಕಮ್**
**ಶ್ಲೋಕತುರ್ಯ ಭಾಷಣಾಂತ ಕೃಷ್ಣ ಸಂಪ್ರಕಾಶಕಮ್ ।**
**ಶಬ್ದವರ್ತನಾಂತ ಹೇತು ನಾಮ ಜೀವ ನಿಸ್ತರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೪೬॥**

ಕಾಶಿಯಲ್ಲಿ ಮಾಯಾವಾದಿಸಂನ್ಯಾಸಿಗಳ ಸಭೆಯಲ್ಲಿ ಅವನು ಶ್ರೀಮದ್ಭಾಗವತವು ಬ್ರಹ್ಮಸೂತ್ರಗಳಿಗೆ ಶ್ರೀಕೃಷ್ಣನಿಂದ ಬ್ರಹ್ಮ ಮತ್ತು ಬ್ರಹ್ಮನಿಂದ ನಾರದ, ಹೀಗೆ ಗುರುಶಿಷ್ಯಪರಂಪರೆಯಮೂಲಕ ಯಥಾವತ್ ಸಾಗಿಬಂದ ಸಹಜ ಭಾಷ್ಯವಾಗಿದೆ ಎಂದು ಬೋಧಿಸಿದನು. ಚತುಃಶ್ಲೋಕಿ ಭಾಗವತಕ್ಕೆ ಅವನು ನೀಡಿದ ವಿವರಣೆಯಲ್ಲಿ ಕೊನೆಗೆ ಅದ್ವಿತೀಯ ಪರಾತ್ಪರಸತ್ಯ, ಎಲ್ಲ ಬ್ರಹ್ಮಾಂಡಗಳ ಪ್ರಕಾಶಕ್ಕೆ ಮೂಲನಾದ ಸರ್ವೋತ್ತಮ ಪರಮಪುರುಷ ಶ್ರೀಕೃಷ್ಣನನ್ನು ಅದ್ಭುತವಾಗಿ ಪ್ರಕಟಿಸಿದನು. ಕೇವಲ ಶ್ರೀಕೃಷ್ಣನ ದಿವ್ಯನಾಮಗಳ ಅಲೌಕಿಕ ಶಬ್ದಕಂಪನ – ಶಬ್ದಬ್ರಹ್ಮ ಮಾತ್ರ ಜೀವಾತ್ಮರಿಗೆ ಹುಟ್ಟುಸಾವುಗಳ ಜೀವನಚಕ್ರದಿಂದ ಬಿಡುಗಡೆಯನ್ನು ನೀಡುವ ಅತ್ಯುನ್ನತ ಭಾಗ್ಯವನ್ನು ಪ್ರದಾನಿಸುತ್ತದೆ ಎಂದು ಒತ್ತಿ ಹೇಳಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೪೭

**ಆತ್ಮರಾಮವಾಚನಾದಿ ನಿರ್ವಿಶೇಷ ಖಂಡನಮ್**
**ಶ್ರೌತವಾಕ್ಯ ಸಾರ್ಥಕೈಕ ಚಿದ್ವಿಲಾಸ ಮಂಡನಮ್ ।**
**ದಿವ್ಯಕೃಷ್ಣ ವಿಗ್ರಹಾದಿ ಗೌಣಬುದ್ಧಿ ಧಿಕ್ಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೪೭॥**

ಶ್ರೀಮದ್ಭಾಗವತದ ಪ್ರಖ್ಯಾತ ಆತ್ಮಾರಾಮ ಶ್ಲೋಕವನ್ನು ಅರವತ್ತನಾಲ್ಕು ಬಗೆಗಳಲ್ಲಿ ವರ್ಣಿಸಿ ಮಹಾಪ್ರಭುವು ಶಂಕರಾಚಾರ್ಯರ ನಿರಾಕಾರತತ್ತ್ವವನ್ನು ಚೂರುಚೂರು ಮಾಡಿದನು. ಶಾಸ್ತ್ರಗಳಲ್ಲಿನ ಅನೇಕ ಆಧಾರಗಳ ಸಹಾಯದಿಂದ ಭಗವಂತನ ಮಧುರಲೀಲೆಗಳನ್ನು ಬೆಳಕಿಗೆ ತಂದನು. ಶ್ರೀಕೃಷ್ಣನ ಪೂಜನೀಯ ಅರ್ಚವಿಗ್ರಹಗಳು ಕೇವಲ ಭ್ರಾಮಕ ಭೌತಜಗತ್ತಿನ ಸಾತ್ವಿಕಗುಣದ ರೂಪಾಂತರಗಳು ಮಾತ್ರ ಎಂಬ ತಿರಸ್ಕರಣೀಯ ಸಿದ್ಧಾಂತವನ್ನು ಬಲವಾಗಿ ಧಿಕ್ಕರಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೪೮

**ಬ್ರಹ್ಮಪಾರಮಾತ್ಮ್ಯ ಲಕ್ಷಣಾದ್ವಯೈಕ ವಾಚನಮ್**
**ಶ್ರೀವ್ರಜಸ್ವಸಿದ್ಧ ನಂದ ಲೀಲ ನಂದ ನಂದನಮ್ ।**
**ಶ್ರೀ ರಸಸ್ವರೂಪ ರಾಸಲೀಲ ಗೋಪಸುಂದರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೪೮॥**

ಶ್ರೀಮದ್ಭಾಗವತದ "ಬ್ರಹ್ಮೇತಿ ಪರಮಾತ್ಮೇತಿ ಭಗವಾನ್ ಇತಿ ಶಬ್ದ್ಯತೆ" ಶ್ಲೋಕವನ್ನು ಉಲ್ಲೇಖಿಸುತ್ತಾ ಮತ್ತು ಆ ಮೂಲಕ ಜ್ಞಾನಿಗಳಿಂದ ಮತ್ತು ಯೋಗಿಗಳಿಂದ ಅನುಕ್ರಮವಾಗಿ ಅವರ ಕಟ್ಟಕಡೆಯ ಧ್ಯೇಯ ಎಂದು ಪರಿಗಣಿಸಲ್ಪಡುವ ಬ್ರಹ್ಮನ್ ಮತ್ತು ಪರಮಾತ್ಮ ತತ್ತ್ವಗಳನ್ನು ಸಮನ್ವಯಗೊಳಿಸುತ್ತಾ, ಮಹಾಪ್ರಭುವು, ಪರಾತ್ಪರ ಸತ್ಯದ ಬಗೆಗಿನ ಜ್ಞಾನದ ತಾತ್ಪರ್ಯ ಮತ್ತು ಮೂಲಭೂತ ತತ್ತ್ವವಾಗಿರುವ ಎಲ್ಲಾ ಆಧ್ಯಾತ್ಮಿಕ ಸಂಬಂಧಗಳ ಸರ್ವೋನ್ನತ ಆದಿಮೂಲ ತತ್ತ್ವವಾಗಿರುವ ಸರ್ವೋತ್ತಮ ಪರಮಪುರುಷ, ಅತ್ಯುನ್ನತವಾದ ಭಗವಾನ್ ತತ್ತ್ವವು ಹೇಗೆ ಬ್ರಹ್ಮನ್ ಮತ್ತು ಪರಮಾತ್ಮ ತತ್ತ್ವಗಳನ್ನು ತನ್ನಲ್ಲಿ ಒಳಗೊಂಡಿದೆ ಮತ್ತು ಹೇಗೆ ಅವೆರಡನ್ನೂ ಮೀರಿದ್ದಾಗಿದೆ ಎಂದು ತೋರಿಸಿಕೊಟ್ಟನು.

ಆ ನಂತರ ಮಹಾಪ್ರಭುವು ಸ್ವಯಂಸಿದ್ಧ, ಗುಪ್ತ ಹಾಗೂ ಆನಂದಮಯ ಲೀಲೆಗಳನ್ನು ಪರಿಚಯಿಸುತ್ತಾ, ಖಂಡಿತವಾಗಿಯೂ ವೈಕುಂಠಕ್ಕಿಂತಲೂ ಮೇಲೆ ಅತ್ಯುನ್ನತವಾದ ಮತ್ತು ಊಹಾತೀತ ಶಾಶ್ವತ ಧಾಮವಾದ ವೃಂದಾವನದಲ್ಲಿ ಪರಾತ್ಪರ ಸತ್ಯ, ದೇವಾಧಿದೇವ ಪರಮಪುರುಷನು ಪುತ್ರತನದ ತನ್ನ ದಿವ್ಯಲೀಲೆಗಳನ್ನು ಪರಿಪೂರ್ಣಗೊಳಿಸಲು ಶ್ರೀನಂದನಂದನನಾಗಿ ಕಾಣಿಸಿಕೊಳ್ಳುತ್ತಾನೆ ಎಂದು ಸೂಚಿಸಿದನು. ಕಟ್ಟಕಡೆಗೆ ಮಹಾಪ್ರಭುವು ಪೂರ್ಣಪ್ರಮಾಣದ ಆಸ್ತಿಕತೆಯಲ್ಲಿ ರಸತತ್ತ್ವದ ಸಂಪೂರ್ಣ ಕಲ್ಪನೆಯನ್ನು ಪರಿಗಣಿಸುತ್ತಾ, ಎಲ್ಲ ರಸಗಳನ್ನೊಳಗೊಂಡ ಮೂಲ ಮತ್ತು ಪ್ರಧಾನ ರಸವಾದ ಮಾಧುರ್ಯರಸದಲ್ಲಿ ಪತ್ನಿತನವನ್ನು ಸ್ವೀಕರಿಸುವಮೂಲಕ ದಿವ್ಯಪರಮಾನಂದದ ಪೂರ್ಣಸ್ವರೂಪದ ನೈಜಸ್ವಭಾವವನ್ನು ಪ್ರಚುರಪಡಿಸಿದನು. ಅದೇವೇಳೆ ಸರ್ವಸುಂದರನ ಅಂತಃಶಕ್ತಿಯು ನಿರ್ವಹಿಸಿದ ರಾಸಲೀಲೆಯೆಂಬ ದಿವ್ಯ ಕ್ರೀಡಾಪೂರ್ಣ ಪ್ರಣಯಪೂರ್ವಕ ಪ್ರೇಮಲೀಲೆಯು ಜೀವಾತ್ಮರ ಏಕಮಾತ್ರ ಅತ್ಯುನ್ನತ ಧ್ಯೇಯವಾಗಿದೆ ಎಂದು ಸೂಚಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೪೯

**ರಾಧಿಕಾವಿನೋದಮಾತ್ರ ತತ್ತ್ವಲಕ್ಷಣಾನ್ವಯಮ್**
**ಸಾಧುಸಂಗ ಕೃಷ್ಣನಾಮ ಸಾಧನೈಕ ನಿಶ್ಚಯಮ್ ।**
**ಪ್ರೇಮ ಸೇವನೈಕ ಮಾತ್ರ ಸಾಧ್ಯ ಕೃಷ್ಣ ತತ್ಪರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೪೯॥**

ರಾಧಾರಾಣಿಯ ಜೊತೆಗಿನ ಪ್ರೇಮಲೀಲೆಗಳ ನೆನಪಿನಲ್ಲಿ ಸದಾ ಮಗ್ನನಾಗಿರುವ ಮಹಾಪ್ರಭುವು ಜ್ಞಾನಿಗಳ ಸಭೆಯಲ್ಲಿ ರಾಧಾವಿನೋದ ಮಾತ್ರ ಏಕೈಕ ಸಂಬಂಧತತ್ತ್ವ ಅಥವಾ ಎಲ್ಲಾ ಆಧ್ಯಾತ್ಮಿಕ ಸಂಬಂಧಗಳ ಏಕಮಾತ್ರ ಸಾರ ಮತ್ತು ಅದು ಗುರುಶಿಷ್ಯ ಪರಂಪರೆಯ ಮೂಲಕ ಇಳಿದುಬರುತ್ತದೆ ಎಂದು ದೃಢಪಡಿಸಿದನು. ಶ್ರೀಮತಿ ರಾಧಾರಾಣಿಯ ಒಲವಿನ ಗೋಪಿಜನವಲ್ಲಭ ಶ್ರೀಕೃಷ್ಣನ ಪ್ರೇಮಪೂರ್ವಕ ಭಕ್ತಿಸೇವೆಯ ಅವಕಾಶವನ್ನು ಗಳಿಸುವ ಜೀವಾತ್ಮನ ಅತ್ಯುನ್ನತ ಧ್ಯೇಯ(ಪ್ರಯೋಜನ)ವನ್ನು ಸಾಧಿಸಲು ಶ್ರೀಕೃಷ್ಣನ ದಿವ್ಯನಾಮಗಳನ್ನು ಸಾಧುಸಂಗದಲ್ಲಿ ಜಪಿಸುವುದೊಂದೇ ಸಮರ್ಪಕವಾದ ವಿಧಾನ(ಅಭಿಧೇಯ) ಎಂದು ದೃಢಪಡಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೫೦

**ಆತ್ಮಾರಾಮ ವಾಚನೈಕ ಷಷ್ಟಿಕಾರ್ಥ ದರ್ಶಿತಮ್**
**ರುದ್ರಸಂಖ್ಯ ಶಬ್ದಜಾತ ಯದ್ಯದರ್ಥ ಸಂಭೃತಮ್ ।**
**ಸರ್ವಸರ್ವ ಯುಕ್ತ ತತ್ತದರ್ಥ ಭೂರಿದಾಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೫೦॥**

ಶ್ರೀಮದ್ಭಾಗವತದ ಆತ್ಮಾರಾಮ ಶ್ಲೋಕಕ್ಕೆ ಅವನು ಅರವತ್ತನಾಲ್ಕು ಬೇರೆ ಬೇರೆ ವಿವರಣೆಗಳನ್ನು ನೀಡಿದನು. ಈ ಶ್ಲೋಕದ ಹನ್ನೊಂದು ಶಬ್ದಗಳನ್ನು ಬೇರೆಬೇರೆಯಾಗಿ, ಒಂದಾದಮೇಲೊಂದರಂತೆ ಪ್ರತಿಯೊಂದು ಶಬ್ದದ ಹಲವು ಆಂತರಿಕ ಅರ್ಥಗಳನ್ನು ಹೊಂದಿಸುತ್ತಾ ಈ ಶ್ಲೋಕವು ಶುದ್ಧಭಕ್ತಿ ಸಿದ್ಧಾಂತದ ಸಂಪೂರ್ಣ ತಾತ್ಪರ್ಯಗಳ ಭಂಡಾರ ಎಂದು ತೋರಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೫೧

**ಶ್ರೀ ಸನಾತನಾನು ರೂಪ ಜೀವ ಸಂಪ್ರದಾಯಕಮ್**
**ಲುಪ್ತತೀರ್ಥ ಶುದ್ಧಭಕ್ತಿ ಶಾಸ್ತ್ರ ಸುಪ್ರಚಾರಕಮ್ ।**
**ನೀಲಶೈಲನಾಥಪೀಠ ನೈಜಕಾರ್ಯ ಸೌಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೫೧॥**

ಶ್ರೀ ಸನಾತನಗೋಸ್ವಾಮಿ, ಅವನ ಕಿರಿಯ ಸೋದರ ಶ್ರೀ ರೂಪಗೋಸ್ವಾಮಿ, ಶ್ರೀ ಜೀವಗೋಸ್ವಾಮಿ ಮತ್ತು ಅವರ ಅನುಯಾಯಿಗಳ ಮೂಲಕ ಮಹಾಪ್ರಭುವು ತನ್ನ ಸಂಪ್ರದಾಯವನ್ನು ಸಂಸ್ಥಾಪಿಸಿದನು ಮತ್ತು ಪ್ರಕಟಪಡಿಸಿದನು. ಅವನು ಹಲವು ಪುಣ್ಯಕ್ಷೇತ್ರಗಳಿರುವ ಸ್ಥಳಗಳನ್ನು ಪ್ರಕಟಪಡಿಸಿದನು ಮತ್ತು ಶುದ್ಧಭಕ್ತಿಶಾಸ್ತ್ರವನ್ನು ನಿಖರವಾಗಿ ಬೋಧಿಸಿದನು. ನೀಲಾಚಲದಲ್ಲಿ ಶ್ರೀ ಜಗನ್ನಾಥಸ್ವಾಮಿಯ ಸೇವಕರ ಮುಂದೆ ತನ್ನ ಆರಾಧನೆಯ ನಿಜಮಾರ್ಗವನ್ನು ಪ್ರೀತಿಯಿಂದ ಪ್ರಚುರಪಡಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೫೨

**ತ್ಯಾಗವಾಹ್ಯ ಭೋಗಬುದ್ಧಿ ತೀವ್ರದಂಡ ನಿಂದನಮ್**
**ರಾಯಶುದ್ಧ ಕೃಷ್ಣಕಾಮ ಸೇವನಾಭಿನಂದನಮ್ ।**
**ರಾಯರಾಗ ಸೇವನೋಕ್ತ ಭಾಗ್ಯಕೋಟಿ ದುಷ್ಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೫೨॥**

ಮನಸ್ಸಿನೊಳಗೆ ಅನೇಕ ಪ್ರಾಪಂಚಿಕ ಭೋಗಲಾಲಸೆಗಳನ್ನು ಇಟ್ಟುಕೊಂಡು ಬಾಹ್ಯವಾಗಿ ತ್ಯಾಗಿಗಳಂತೆ ವರ್ತಿಸುವರ ಬುದ್ಧಿಯನ್ನು ಮಹಾಪ್ರಭುವು ಬಲವಾಗಿ ಖಂಡಿಸಿ ಅವರನ್ನು ನಿಂದಿಸಿದನು. ಅದಾಗ್ಯೂ

ರಾಗಭಕ್ತಿಯ ಭಾವದಲ್ಲಿ ಶ್ರೀಕೃಷ್ಣನ ಸೇವೆಯನ್ನು ಮಾಡುವ ಬಯಕೆಯಿಂದ ಪ್ರೇರಿತನಾಗಿ ಜಗನ್ನಾಥದೇವರ ದೇವದಾಸಿಯರಿಗೆ ನೃತ್ಯಕಲೆಯನ್ನು ಕಲಿಸಿಕೊಟ್ಟ ಶ್ರೇಷ್ಠ ವೈಷ್ಣವ ಶ್ರೀ ರಾಮಾನಂದರಾಯನ ನಿಷ್ಕಾಮ ದಿಟ್ಟ ನಡತೆಯನ್ನು ಅಭಿನಂದಿಸಿದನು ಮತ್ತು ರಾಗಭಕ್ತಿಯಲ್ಲಿ ಭಗವಂತನ ಸೇವೆಯನ್ನು ಮಾಡಲು ರಾಮಾನಂದರಾಯನಿಗೆ ದೊರಕಿದಂಥ ಅವಕಾಶವು ಕೋಟಿಜನ್ಮಗಳಲ್ಲಿ ಕಷ್ಟಪಟ್ಟು ಗಳಿಸಿದ ಭಾಗ್ಯದ ಫಲ ಎಂದು ಘೋಷಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೫೩

**ಶ್ರೀ ಪ್ರಯಾಗಭಟ್ಟ ವಲ್ಲಭೈಕ ನಿಷ್ಠ ಸೇವನಮ್**
**ನೀಲಶೈಲ ಭಟ್ಟದತ್ತ ರಾಗಮಾರ್ಗರಾಧನಮ್ ।**
**ಶ್ರೀಗದಾಧರಾರ್ಪಿತಾಧಿಕಾರ ಮಂತ್ರ ಮಾಧುರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥ ೫೩॥**

ಆಂಧ್ರಪ್ರದೇಶದವನಾಗಿದ್ದ ವಲ್ಲಭಭಟ್ಟ ಎಂಬ ಶುದ್ಧಾದ್ವೈತ ಸಂಪ್ರದಾಯದ ಶ್ರೇಷ್ಠವೈಷ್ಣವನು ಒಂದು ಸಾರಿ ಪ್ರಯಾಗಧಾಮದ ತನ್ನ ಮನೆಯಲ್ಲಿ ನಿಷ್ಠೆಯಿಂದ ಅಡೆತಡೆಯಿಲ್ಲದೇ ಮಹಾಪ್ರಭುವಿನ ಸೇವೆಯನ್ನು ಕೈಗೊಂಡನು. ಅನಂತರ ಶ್ರೀ ಪುರುಷೋತ್ತಮ ಕ್ಷೇತ್ರದಲ್ಲಿ ಮಹಾಪ್ರಭುವು ವಲ್ಲಭಭಟ್ಟನಿಗೆ ಶ್ರೀಕೃಷ್ಣನ ಪ್ರೇಮಪೂರ್ವಕ ಭಕ್ತಿಸೇವೆಯನ್ನು ಕೈಗೊಳ್ಳುವ ರಾಗಭಕ್ತಿಗೆ ಪ್ರವೇಶಿಸುವ ಅನುಮತಿಯನ್ನು ನೀಡಿದನು ಮತ್ತು ಅದಕ್ಕೆ ಅವಶ್ಯವಾದ ಶಾಸ್ತ್ರಬದ್ಧ ಮಂತ್ರಗಳನ್ನು ಶ್ರೀ ಗದಾಧರ ಪಂಡಿತನ ನಿರ್ದೇಶನದಲ್ಲಿ ಕಲಿಯುವ ವ್ಯವಸ್ಥೆಯನ್ನು ಮಾಡಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೫೪

**ಶ್ರೀ ಸ್ವರೂಪ ರಾಯಸಂಗ ಗಂಭಿರಾಂತ್ಯ ಲೀಲನಮ್**
**ದ್ವಾದಶಾಬ್ದ ವಹ್ನಿಗರ್ಭ ವಿಪ್ರಲಂಭ ಶೀಲನಮ್ ।**
**ರಾಧಿಕಾಧಿರೂಢಭಾವ ಕಾಂತಿ ಕೃಷ್ಣ ಕುಂಜರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೫೪॥**

ಅವನ ಲೀಲೆಗಳು ತನ್ನ ಆತ್ಮೀಯ ಸಂಗಾತಿಗಳಾದ ಸ್ವರೂಪ ದಾಮೋದರ ಮತ್ತು ಶ್ರೀ ರಾಮಾನಂದರಾಯನ ಜೊತೆಗಿನ ಗಂಭೀರ ಲೀಲೆಗಳಲ್ಲಿ ಅಂತ್ಯಕಂಡವು. ಶ್ರೀಕೃಷ್ಣನಿಂದ ಅಗಲಿಕೆಯ ತೀವ್ರಭಾವದ ತಾಪದೊಳಗೆ ಅವನು ಹನ್ನೆರಡು ವರ್ಷಗಳ ದೀರ್ಘಕಾಲ ತನ್ನ ವಿರಹವೇದನೆಯನ್ನು ಸಂಗಡಿಗರ ಜೊತೆ ಚರ್ಚಿಸುತ್ತಾ ಆನಂದಿಸಿದನು. ಅದೇವೇಳೆ ಅವನು ರಾಧಾರಾಣಿಯ ಮೇಲಿನ ಪ್ರೇಮದಿಂದ ಮತ್ತನಾಗಿ ಆನೆಯಂತಿದ್ದನು ಮತ್ತು ಅವನ ರೂಪವು ರಾಧಾಭಾವದಿಂದ ಕಾಂತಿಯುತವಾಗಿತ್ತು. ಏಕೆಂದರೆ ಅವನು ರಾಧಾರಾಣಿಯ ಮೈಕಾಂತಿಯಿಂದ ಕಂಗೊಳಿಸುತ್ತಿದ್ದ ಸುಂದರ ಸ್ವಯಂ ಶ್ರೀಕೃಷ್ಣನೇ ಆಗಿದ್ದ. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೫೫

**ಶ್ರೀ ಸ್ವರೂಪ ಕಂಠಲಗ್ನ ಮಾಥುರಪ್ರಲಾಪಕಮ್**
**ರಾಧಿಕಾನುವೇದನಾರ್ಥ ತೀವ್ರವಿಪ್ರಲಂಭಕಮ್ ।**
**ಸ್ವಪ್ನವತ್ಸಮಾಧಿದೃಷ್ಟ ದಿವ್ಯವರ್ಣನಾತುರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೫೫॥**

ಶ್ರೀ ಸ್ವರೂಪದಾಮೋದರನ ಕತ್ತನ್ನು ಬಿಗಿದಪ್ಪಿ ಅವನು ಶ್ರೀಕೃಷ್ಣ ವೃಂದಾವನವನ್ನು ಬಿಟ್ಟು ಮಥುರೆಗೆ ಹೋದಾಗ ಶ್ರೀಮತಿ ರಾಧಾರಾಣಿಯು ಅಗಲಿಕೆಯನೋವಿನಿಂದ ಉಲಿದ ನುಡಿಗಳನ್ನು ದುಃಖದಿಂದ ಉಚ್ಚರಿಸಲು ಪ್ರಾರಂಭಿಸಿದನು. ಕೃಷ್ಣನಿಂದ ಅಗಲಿಕೆಯ ಭಾವದ ತೀವ್ರತೆಯ ಕಾರಣದಿಂದ ಅವನು ಶ್ರೀಮತಿ ರಾಧಾರಾಣಿಯಿಂದ ಅನುಭವಿಸಲ್ಪಟ್ಟ ಅಗಲಿಕೆಯ ದುಃಖ ಮತ್ತು ವ್ಯಾಕುಲತೆಗಳನ್ನು ಆಸ್ವಾದಿಸಿದನು. ಹೊರಗಿನವರಿಗೆ ಕನಸುಗಳಂತೆ ಅನಿಸುವ, ತನ್ನ ದಿವ್ಯಲೀಲೆಗಳಲ್ಲಿ ಮಗ್ನನಾಗಿದ್ದುಕೊಂಡು ಅನುಭವಿಸಿದ ದೃಶ್ಯಗಳನ್ನು ಆತುರದಿಂದ ವರ್ಣಿಸುತ್ತಿದ್ದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೫೬

**ಸಾತ್ವಿಕಾದಿ ಭಾವಚಿಹ್ನ ದೇಹದಿವ್ಯ ಸೌಷ್ಠವಮ್**
**ಕೂರ್ಮಧರ್ಮ ಭಿನ್ನಸಂಧಿ ಗಾತ್ರ ಪುಷ್ಪಪೇಲವಮ್ ।**
**ಹೃಸ್ವದೀರ್ಘ ಪದ್ಮಗಂಧ ರಕ್ತಪೀತ ಪಾಂಡುರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೫೬॥**

ದಿವ್ಯಪ್ರೇಮದ ಭಾವಗಳಾದ ಸಾತ್ವಿಕಾದಿ ಎಂಟು ಚಿಹ್ನೆಗಳು ಅವನ ದಿವ್ಯದೇಹದ ಸೌಂದರ್ಯವನ್ನು ವೃದ್ಧಿಸುತ್ತಿದ್ದವು. ಕೆಲವೊಮ್ಮೆ ಆಮೆಯಂತೆ ಅವನು ತನ್ನ ಅಂಗಾಂಗಗಳನ್ನೆಲ್ಲಾ ದೇಹದೊಳಕ್ಕೆ ಎಳೆದುಕೊಳ್ಳುವನು ಮತ್ತು ಕೆಲವೊಮ್ಮೆ ಅವನ ಅಂಗಾಂಗಗಳ ಕೀಲುಗಳು ಸಡಿಲಗೊಂಡು ದೀರ್ಘವಾಗುವವು ಮತ್ತು ಕೆಲವೊಮ್ಮೆ ಅವನ ದೇಹವು ಹೂವಿನಂತೆ ಕೋಮಲವಾಗುವುದು ಮತ್ತು ಕೆಲವೊಮ್ಮೆ ಅವನ ದೇಹವು ಶುದ್ಧ ಬಿಳಿಬಣ್ಣದ ಮಲ್ಲಿಗೆ ಹೂವಿನಂಥ ಕಾಂತಿಯಿಂದ ಸೌಂದರ್ಯವನ್ನು ವರ್ಧಿಸಿಕೊಂಡಂತೆ ಕಾಣುವುದು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೫೭

**ತೀವ್ರವಿಪ್ರಲಂಭ ಮುಗ್ಧ ಮಂದಿರಾಗ್ರ ಧಾವಿತಮ್**
**ಕೂರ್ಮರೂಪ ದಿವ್ಯಗಂಧ ಲುಬ್ಧಧೇನು ವೇಷ್ಟಿತಮ್ ।**
**ವರ್ಣಿತಾಲಿಕೂಲ ಕೃಷ್ಣಕೇಲಿಶೈಲ ಕಂಧರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೫೭॥**

ತೀವ್ರವಾದ ಅಗಲಿಕೆಯ ಭಾವದಿಂದ ಅತ್ಯಂತ ದುಃಖಿತನಾಗಿ ಮತ್ತು ತಬ್ಬಿಬ್ಬಾಗಿ ಅವನು ಶ್ರೀಜಗನ್ನಾಥದೇವರ ಮಂದಿರದ ಪ್ರವೇಶದ್ವಾರದೆಡೆಗೆ ಧಾವಿಸುವನು. ತೀವ್ರ ಅಗಲಿಕೆಯ ಭಾವದ ಪ್ರಭಾವಕ್ಕೊಳಗಾದಾಗ ಅವನು ಹಠಾತ್ತಾಗಿ ನೆಲಕ್ಕುರುಳುವನು ಮತ್ತು ಅವನ ದೇಹವು ಸಂಕುಚಿತಗೊಂಡು ಆಮೆಯರೂಪವನ್ನು ಹೋಲುತ್ತಿತ್ತು. ಅವನದೇಹದಿಂದ ಹೊರಟ ದಿವ್ಯಸುವಾಸನೆಗೆ ಆಕರ್ಷಣೆಗೊಂಡ ತೇಲಾಂಗಿ ಹಸುಗಳು ಅವನನ್ನು ಸುತ್ತುವರಿಯುವವು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೫೮

**ಇಂದುಸಿಂಧು ನೃತ್ಯದೀಪ್ತ ಕೃಷ್ಣಕೇಲಿ ಮೋಹಿತಮ್**
**ಊರ್ಮಿಶೀರ್ಷ ಸುಪ್ತದೇಹ ವಾತರಂಗ ವಾಹಿತಮ್ ।**
**ಯಾಮುನಾಲಿಕೃಷ್ಣಕೇಲಿ ಮಗ್ನಸೌಖ್ಯ ಸಾಗರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥ ೫೮॥**

ಒಂದುಸಾರಿ ಅವನು ಬೆಳದಿಂಗಳ ರಾತ್ರಿಯಲ್ಲಿ ತನ್ನ ಭಕ್ತರೊಂದಿಗೆ ಕೃಷ್ಣಲೀಲೆಗಳ ಅಮೃತವನ್ನು ಸವಿಯುತ್ತಾ ಕಡಲತೀರದಲ್ಲಿ ಸುತ್ತುತ್ತಿರುವಾಗ, ಅಕಸ್ಮಾತ್ತಾಗಿ ಸಮುದ್ರದ ತೆರೆಗಳ ಮೇಲೆ ನರ್ತಿಸುತ್ತಿರುವ ಚಂದಿರನ ಪ್ರತಿಬಿಂಬವನ್ನು ನೋಡಿದನು. ಆ ದೃಶ್ಯವನ್ನು ನೋಡುತ್ತಾ ಅವನ ಹೃದಯದಲ್ಲಿ ಶ್ರೀಕೃಷ್ಣನು ಯಮುನಾನದಿಯಲ್ಲಿ ನಡೆಸಿದ ಲೀಲೆಗಳ ರಮಣೀಯ ಸೌಂದರ್ಯದ ನೆನಪು ಜಾಗೃತವಾಯಿತು ಮತ್ತು ಅವನು ಅಲ್ಲಿಯೇ ಪ್ರಜ್ಞೆತಪ್ಪಿ ಬಿದ್ದುಹೋದನು, ಮತ್ತು ಆ ಕ್ಷಣವೇ ಯಾರಗಮನಕ್ಕೂ ಬಾರದಹಾಗೆ ನಿದ್ದೆಯಲ್ಲಿರುವನೋ ಎಂಬಂತೆ ತೋರುತ್ತಿದ್ದ ಗೌರಸುಂದರನ ದಿವ್ಯರೂಪವು(ದಿವ್ಯಾನಂದದಲ್ಲಿ ಮುಳುಗಿದ್ದುದರಿಂದ ಅವನ ದೇಹವು ಒಣಮರದ ದಿಮ್ಮಿಯಂತೆ ಹಗುರವಾಗಿ ತೇಲಾಡುವಂತಾಗಿತ್ತು) ಕಡಲತೆರೆಗಳಮೇಲಿನ ಇಂಪಾದ ಲಯಬದ್ಧ ಮಂದಮಾರುತದೊಂದಿಗೆ ತೇಲಿಹೋಯಿತು. ಆ ವೇಳೆಯಲ್ಲಿ ಅವನು ಯಮುನಾನದಿಯಲ್ಲಿ ಶ್ರೀಕೃಷ್ಣನು ಗೋಪಿಕೆಯರೊಂದಿಗೆ ಆಡಿದ ಜಲಕ್ರೀಡೆಯ ಲೀಲೆಗಳನ್ನು ನೇರವಾಗಿ ವೀಕ್ಷಿಸಿದನು ಮತ್ತು ಅಗಾಧವಾದ ಆನಂದಸಾಗರದಲ್ಲಿ ಮುಳುಗಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೫೯

**ರಾತ್ರಿಶೇಷ ಸೌಮ್ಯವೇಷ ಶಾಯಿತಾರ್ದ್ರ ಸೈಕತಮ್**
**ಭಿನ್ನಸಂಧಿ ದೀರ್ಘದೇಹ ಪೇಲವಾತಿ ದೈವತಮ್ ।**
**ಶ್ರಾಂತಭಕ್ತ ಚಕ್ರತೀರ್ಥ ಹೃಷ್ಟದೃಷ್ಟಿ ಗೋಚರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೫೯॥**

ರಾತ್ರಿಯೆಲ್ಲ ಅವನಿಗಾಗಿ ಹುಡುಕಿ ದಣಿದ ಅವನ ಭಕ್ತರು ಕೊನೆಗೆ ನಸುಕಿನಲ್ಲಿ ಚಕ್ರತೀರ್ಥದ ಒದ್ದೆಮರಳಿನಮೇಲೆ ಪ್ರಶಾಂತನಾಗಿ ಬಿದ್ದುಕೊಂಡಿದ್ದ ಗೌರಸುಂದರನನ್ನು ನೋಡಿದರು. ಅವನ ದಿವ್ಯ

ದೃಢಕಾಯ ರೂಪವು, ವಿಶ್ರಾಂತವಾಗಿ ನಿದ್ದೆಹೋಗಿದ್ದು, ದೀರ್ಘವಾಗಿದ್ದು, ಅಂಗಾಂಗಗಳ ಕೀಲುಗಳು ಸಡಿಲಗೊಂಡು ಕೊಂಡಿಗಳು ಕಳಚಿಕೊಂಡಿದ್ದವು. ಮಹಾಪ್ರಭುವನ್ನು ನೋಡಿದ ಭಕ್ತರ ಕಣ್ಣುಗಳಲ್ಲಿ ಆನಂದದ ಕಣ್ಣೀರು ತುಂಬಿಕೊಂಡಿತು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೬೦

**ಆರ್ತಭಕ್ತ ಕಂಠ ಕೃಷ್ಣನಾಮ ಕರ್ಣ ಹೃದ್ಗತಮ್**
**ಲಗ್ನಸಂಧಿ ಸುಷ್ಠುದೇಹ ಸರ್ವಪೂರ್ವ ಸಮ್ಮತಮ್ ।**
**ಅರ್ಧವಾಹ್ಯಭಾವ ಕೃಷ್ಣಕೇಲಿ ವರ್ಣನಾತುರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೬೦॥**

ಕಾತುರ ತುಂಬಿದ ಭಕ್ತರ ಉಚ್ಚಧ್ವನಿಯ ಕೃಷ್ಣನಾಮದ ಕೀರ್ತನೆಯು ಮಹಾಪ್ರಭುವಿನ ಕಿವಿಗಳನ್ನು ಪ್ರವೇಶಿಸಿ ಹೃದಯವನ್ನು ಸ್ಪರ್ಶಿಸಿದಾಕ್ಷಣ ಕೊಂಡಿಕಳಚಿಕೊಂಡಿದ್ದ ಅವನ ಅಂಗಾಂಗಗಳು ಮತ್ತೆ ಕೂಡಿಕೊಂಡವು. ಅವನ ಹಿಂದಿನ ಸ್ವಾಭಾವಿಕ ಸುಂದರರೂಪವು ಮತ್ತೆ ಗೋಚರಿಸಿತು ಮತ್ತು ಅಗಲಿಕೆಯಭಾವದಿಂದ ದುಃಖಿತನಾಗಿದ್ದ ಅವನು ಅರೆಪ್ರಜ್ಞಾವಸ್ಥೆಯಲ್ಲಿ, ದಿವ್ಯಾನಂದದಲ್ಲಿ ಮುಳುಗಿದ್ದಾಗ ತಾನು ವೀಕ್ಷಿಸಿದ ಶ್ರೀಕೃಷ್ಣನ ವಿವಿಧ ಅಲೌಕಿಕ ಲೀಲೆಗಳನ್ನು ವರ್ಣಿಸಲಾರಂಭಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೬೧

**ಯಾಮುನಾಂಬು ಕೃಷ್ಣರಾಧಿಕಾಲಿ ಕೇಲಿ ಮಂಡಲಮ್**
**ವ್ಯಕ್ತಗುಪ್ತ ದೃಪ್ತತೃಪ್ತ ಭಂಗಿ ಮಾದನಾಕುಲಮ್ ।**
**ಗೂಢದಿವ್ಯ ಮರ್ಮಮೋದ ಮೂರ್ಛನಾ ಚಮತ್ಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೬೧॥**

ಶ್ರೀವೃಂದಾವನದಲ್ಲಿ ಶ್ರೀಕೃಷ್ಣನು ರಾಧಿಕಾ ಮತ್ತು ಇತರ ಗೋಪಿಯರೊಂದಿಗೆ ಯಮುನಾನದಿಯಲ್ಲಿ ನಡೆಸಿದ ಕೆಲವೊಮ್ಮೆ ವ್ಯಕ್ತವಾದ, ಕೆಲವೊಮ್ಮೆ ಗುಪ್ತವಾದ, ಕೆಲವೊಮ್ಮೆ ಮನಮೋಹಕವಾದ, ಕೆಲವೊಮ್ಮೆ ಸಂತೃಪ್ತ ಪ್ರೇಮಭಾವವನ್ನು ಸೂಚಿಸುವ ಪ್ರಣಯಪ್ರಸಂಗದ ಲೀಲೆಗಳು ಹೃನ್ಮನಗಳನ್ನು ಆಕರ್ಷಿಸುತ್ತವೆ. ಜಗತ್ತನ್ನು ಆಶ್ಚರ್ಯಚಕಿತಗೊಳಿಸುವ, ಗೂಢ ದಿವ್ಯಾನಂದಮಯ ಲೋಕದೊಳಗಿನ ಹೃದಯದ ಈ ಅತ್ಯಾಕರ್ಷಕ ಮಧುರ ಸಂಗೀತವು ಶ್ರೀಚೈತನ್ಯ ಮಹಾಪ್ರಭುವಿನಿಂದ ಹಂಚಲ್ಪಟ್ಟಿತು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೬೨

**ಆಸ್ಯಘರ್ಷಣಾದಿ ಚಾಟಕಾದ್ರಿ ಸಿಂಧು ಲೀಲನಮ್**
**ಭಕ್ತಮರ್ಮಭೇದಿ ತೀವ್ರದುಃಖಸೌಖ್ಯ ಖೇಲನಮ್ ।**
**ಅತ್ಯಚಿಂತ್ಯ ದಿವ್ಯವೈಭವಾಶ್ರಿತೈಕ ಶಂಕರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥ ೬೨॥**

ಚಾಟಕ ಪರ್ವತವನ್ನು ನೋಡುತ್ತಿದ್ದಂತೆಯೇ ಅವನು ಸಹಿಸಲಾಗದ ನೋವಿನಿಂದ(ಚಾಟಕ ಪರ್ವತವನ್ನು ನೋಡಿದಾಗ ಮಹಾಪ್ರಭುವಿಗೆ ಶ್ರೀಗೋವರ್ಧನ ಗಿರಿಯ ನೆನಪಾಗುವುದು)ತನ್ನ ಮುಖಾರವಿಂದವನ್ನು ನೆಲಕ್ಕೆ ಉಜ್ಜಿಕೊಳ್ಳುವನು, ಅಥವಾ ವೃಂದಾವನದ ಜಲಕ್ರೀಡೆಯ ನೆನಪಾಗಿ ದಿವ್ಯ ಪ್ರೇಮೋತ್ಕರ್ಷದ ಲಕ್ಷಣಗಳನ್ನು ವ್ಯಕ್ತಪಡಿಸುತ್ತಾ ಸಮುದ್ರದೊಳಕ್ಕೆ ಧುಮುಕುವನು. ಈ ದಿವ್ಯ ಸೂಚನೆಗಳೊಂದಿಗೆ ಅವನು ಭಕ್ತರ ಹೃದಯಗಳೊಳಗೆ ಶ್ರೀಕೃಷ್ಣನ ದಿವ್ಯಪ್ರೇಮದ ಮಹಾಸಾಗರದ ಅಗಾಧ ಆಳದಿಂದ ನೋವು ಮತ್ತು ನಲಿವುಗಳ ಅಲೆಗಳನ್ನು ಪಸರಿಸುವನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೬೩

**ಶ್ರೋತ್ರನೇತ್ರ ಗತ್ಯತೀತ ಬೋಧರೋಧಿತಾದ್ಭುತಮ್**
**ಪ್ರೇಮಲಭ್ಯ ಭಾವಸಿದ್ಧ ಚೇತನಾಚಮತ್ಕೃತಮ್ ।**
**ಬ್ರಹ್ಮಶಂಭು ವೇದತಂತ್ರ ಮೃಗ್ಯಸತ್ಯ ಸುಂದರಮ್**
**ಪ್ರೇಮಧಾಮದೇವಮೇವ ನೌಮಿಗೌರಸುಂದರಮ್ ॥೬೩॥**

ಗೌರಾಂಗ ದೇವನು ದೃಷ್ಟಿ ಮತ್ತು ಶ್ರವಣ ಶಕ್ತಿಗಳ ವ್ಯಾಪ್ತಿಗೆ ಅತೀತನಾಗಿರುವನು ಮತ್ತು ಮೇಧಾವಿಗಳ ಪ್ರೌಢಿಮೆಯನ್ನು ದಿಗ್ಭ್ರಮೆಗೊಳಿಸುವನು. ತಮ್ಮನ್ನು ತಾವು ದೃಢವಾಗಿ ನಿಗ್ರಹಿಸಿಕೊಂಡಿರುವ ಸಿದ್ಧಾತ್ಮರ ಹೃದಯಗಳನ್ನು ಕೂಡಾ ಮಹಾಪ್ರಭುವು ತನ್ನ ಮಿತಿಮೀರಿದ ಪ್ರೇಮದ ಮೂಲಕ ವಿಚಲಿತಗೊಳಿಸುವನು. ವೇದಿಕ ಹಾಗೂ ತಾಂತ್ರಿಕ ಶಾಸ್ತ್ರಗಳನ್ನು ಪ್ರಕಟಪಡಿಸಿದ ಬ್ರಹ್ಮ ಮತ್ತು ಶಿವ ಕೂಡಾ ಪರಮಪುರುಷನನ್ನು ಅರಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೬೪

**ವಿಪ್ರಶೂದ್ರ ವಿಜ್ಞಮೂರ್ಖ ಯಾವನಾದಿ ನಾಮದಮ್**
**ವಿತ್ತವಿಕ್ರಮೋಚ್ಚನೀಚ ಸಜ್ಜನೈಕ ಸಂಪದಮ್ ।**
**ಸ್ತ್ರೀಪುಮಾದಿ ನಿರ್ವಿವಾದ ಸಾರ್ವವಾದಿಕೋದ್ಧರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೬೪॥**

ಅವನು ಬ್ರಾಹ್ಮಣರನ್ನು ಮತ್ತು ಶೂದ್ರರನ್ನು, ವಿದ್ವಾಂಸರನ್ನು ಮತ್ತು ಮೂರ್ಖರನ್ನು, ಅನಾರ್ಯರನ್ನು ಮತ್ತು ಹೊಲೆಯರನ್ನು ಕೂಡಾ ಏಕಕಾಲದಲ್ಲಿ ಶುದ್ಧೀಕರಿಸಿದನು. ಅವನು ಶ್ರೀಮಂತರ ಮತ್ತು

ಬಡವರ, ಪ್ರಸಿದ್ಧರ ಮತ್ತು ಪ್ರಾಮಾಣಿಕರ, ಉಚ್ಚಕುಲದವರ ಮತ್ತು ನೀಚಕುಲದವರ ಅತ್ಯುನ್ನತ ಸಂಪತ್ತಾಗಿದ್ದನು. ಭೌತಿಕ ಪ್ರಪಂಚದಲ್ಲಿ ಮತ್ತು ಆಧ್ಯಾತ್ಮಿಕ ಲೋಕದಲ್ಲಿ ಸ್ತ್ರೀಪುರುಷರೆಂಬ ಭೇದಭಾವವಿಲ್ಲದೇ ಎಲ್ಲರಿಂದಲೂ ಅವನು ಜೀವಾತ್ಮರ ಏಕೈಕ ಉದ್ಧಾರಕನೆಂದು ಒಮ್ಮತದಿಂದ ಸ್ವೀಕರಿಸಲ್ಪಟ್ಟಿದ್ದಾನೆ. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೬೫

**ಸಿಂಧುಶೂನ್ಯ ವೇದಚಂದ್ರ ಶಾಕಕುಂಭ ಪೂರ್ಣಿಮಾ**
**ಸಾಂಧ್ಯಚಾಂದ್ರಕೋಪರಾಗ ಜಾತ ಗೌರಚಂದ್ರಮಾ ।**
**ಸ್ನಾನದಾನ ಕೃಷ್ಣನಾಮ ಸಂಗತತ್ಪರಾತ್ಪರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೬೫॥**

ಒಂದುಸಾವಿರದ ನಾಲ್ಕುನೂರ ಏಳನೇ ಶಕಾಬ್ದ, ಫಾಲ್ಗುಣ ಮಾಸದ ಹುಣ್ಣಿಮೆಯ ಸಾಯಂಕಾಲ, ಚಂದ್ರಗ್ರಹಣದ ಸಮಯದಲ್ಲಿ ಪರಾತ್ಪರ ಪರಮ ಸತ್ಯ ಶ್ರೀಗೌರಚಂದ್ರನು ಪೂರ್ಣಚಂದ್ರನಂತೆ ಪ್ರಕಟವಾದನು. ಎಲ್ಲರ ಹೃದಯದಲ್ಲಿ ಆನಂದವು ತುಂಬಿ ತುಳುಕಿತು. ಎಲ್ಲಾಕಡೆ ರತ್ನಾಭರಣಗಳನ್ನು ಹಾಗೂ ಇತರ ಬೆಲೆಬಾಳುವ ಉಡುಗೊರೆಗಳನ್ನು ದೇವರಿಗೆ ಸಮರ್ಪಿಸಲಾಯಿತು ಮತ್ತು ಎಲ್ಲೆಲ್ಲಿಯೂ ಉದಾರವಾಗಿ ದಾನಧರ್ಮಗಳು ನಡೆದವು. ಅಸಂಖ್ಯಾತ ಜನರು ಗುಂಪುಗುಂಪಾಗಿ ಗಂಗಾನದಿಯಲ್ಲಿ ಸ್ನಾನಮಾಡಿದರು ಮತ್ತು ಇವೆಲ್ಲಕ್ಕೂ ಮಿಗಿಲಾಗಿ ಎಲ್ಲೆಲ್ಲೂ ಉಚ್ಚಧ್ವನಿಯ ಸಾಮೂಹಿಕ ಹರಿನಾಮ ಸಂಕೀರ್ತನೆಯು ನಡೆಯಿತು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

### ಶ್ಲೋಕ ೬೬

**ಆತ್ಮಸಿದ್ಧ ಸಾವಲೀಲ ಪೂರ್ಣಸೌಖ್ಯ ಲಕ್ಷಣಮ್**
**ಸ್ವಾನುಭಾವಮತ್ತ ನೃತ್ಯಕೀರ್ತನಾತ್ಮ ವಂಟನಮ್ ।**
**ಅದ್ವಯೈಕ ಲಕ್ಷ್ಯಪೂರ್ಣ ತತ್ತ್ವತತ್ಪರಾತ್ಪರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೬೬॥**

ಅವನು ಸಹಜ ಪ್ರೇಮಲೀಲೆಗಳಿಂದ ತುಂಬಿದ ಸ್ವಯಂ ಪ್ರಮಾಣೀಕೃತವಾದ ಆನಂದದ ಮೂಲವಾಗಿದ್ದಾನೆ. ಅವನ ನೃತ್ಯವು ಉಕ್ಕಿಹರಿಯುವ ಆಧ್ಯಾತ್ಮಿಕ ಆನಂದದ ಮತ್ತಿನಿಂದ ಉದ್ಭವಿಸುತ್ತದೆ ಮತ್ತು ಅವನ ಹರಿನಾಮದ ಜಪ ಮತ್ತು ಕೀರ್ತನೆಗಳು ಆ ಆನಂದವನ್ನು ಅನುಭವಿಸುವ ಮತ್ತು ವಿತರಿಸುವ ಪ್ರಕ್ರಿಯೆಯಿಂದ ಉದ್ಭವಿಸುತ್ತವೆ. ಈ ಎರಡು ಲಕ್ಷಣಗಳು ಪರಿಪೂರ್ಣ ಪರಮಸತ್ಯದ ಸಹಜ ಮತ್ತು ಮೂಲಭೂತ ರಸವತ್ತತೆಯ ಗುರುತುಗಳಾಗಿವೆ. ಹಾಗಾಗಿ ಪರಿಶುದ್ಧ ಪರಮಸತ್ಯವಾಗಿರುವ ಅವನು ಅಸಮೌರ್ಧ್ವ – ತನಗೆ ಮಿಗಿಲಾಗಿ ಮತ್ತು ಸರಿಸಮನಾಗಿ ಯಾರೂ ಇಲ್ಲದಿರುವವನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೬೭

**ಶ್ರೀಪುರೀಶ್ವರಾನುಕಂಪಿಲಬ್ಧ ದೀಕ್ಷದೈವತಮ್**
**ಕೇಶವಾಖ್ಯಭಾರತೀ ಸಕಾಶಕೇಶ ರಕ್ಷಿತಮ್ ।**
**ಮಾಧವಾನುಧೀ ಕಿಶೋರಕೃಷ್ಣ ಸೇವನಾದರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೬೭॥**

ಶ್ರೀ ಈಶ್ವರಪುರಿಯವರಿಂದ ದೀಕ್ಷೆ ತೆಗೆದುಕೊಳ್ಳುವ ಮೂಲಕ ಮಹಾಪ್ರಭುವು ಅವರ ಮೇಲೆ ಕೃಪೆತೋರಿ ಅವರನ್ನು ಹರಸಿದನು. ತನ್ನ ಸುಂದರವಾದ ಕೇಶರಾಶಿಯನ್ನು ಕತ್ತರಿಸಿಕೊಂಡು ಅವನು ಶ್ರೀ ಕೇಶವಭಾರತಿ ಎಂಬವರಿಂದ ಸಂನ್ಯಾಸ ಸ್ವೀಕರಿಸಿದನು. ಶ್ರೀ ಮಾಧವೇಂದ್ರಪುರಿಯವರಿಂದ ಪ್ರದರ್ಶಿತವಾದ ಮಾಧುರ್ಯಭಾವದಲ್ಲಿ ಕಿಶೋರಕೃಷ್ಣನ ಸೇವೆಯನ್ನು ಅತ್ಯುನ್ನತ ಸೇವೆಯೆಂದು ಪರಿಗಣಿಸಿ ಆದರಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೬೮

**ಸಿಂಧುವಿಂದು ವೇದಚಂದ್ರಶಾಕಫಾಲ್ಗುಣೋದಿತಮ್**
**ನ್ಯಾಸಸೋಮನೇತ್ರ ವೇದಚಂದ್ರಶಾಕ ಬೋಧಿತಮ್ ।**
**ವಾಣವಾಣ ವೇದಚಂದ್ರಶಾಕಲೋಚನಾಂತರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥ ೬೮॥**

ಒಂದು ಸಾವಿರದ ನಾಲ್ಕುನೂರ ಏಳನೇ ಶಕಾಬ್ದದಲ್ಲಿ ಗೌಡ(ಶ್ರೀಮಾಯಾಪುರ)ದೇಶದ ಆಗಸದಲ್ಲಿ ಹೊಂಬಣ್ಣದ ದೇವ ಗೌರಸುಂದರನು ಚಂದ್ರನಂತೆ ಉದಯಿಸಿದನು. ಒಂದುಸಾವಿರದ ನಾಲ್ಕುನೂರ ಮುವ್ವತ್ತೊಂದನೇ ಶಕಾಬ್ದದಲ್ಲಿ ಸಂನ್ಯಾಸ ಸ್ವೀಕಾರದ ಲೀಲೆಯನ್ನು ಪ್ರದರ್ಶಿಸಿ ಒಂದು ಸಾವಿರದ ನಾಲ್ಕುನೂರ ಐವತ್ತೈದನೇ ಶಕಾಬ್ದದಲ್ಲಿ ಈ ಲೋಕದಿಂದ ಕಣ್ಮರೆಯಾದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೬೯

**ಶ್ರೀಸ್ವರೂಪರಾಯಸಂಗ ಹರ್ಷಶೇಷ ಘೋಷಣಮ್**
**ಶಿಕ್ಷಣಾಷ್ಟಕಾಖ್ಯ ಕೃಷ್ಣಕೀರ್ತನೈಕ ಪೋಷಣಮ್ ।**
**ಪ್ರೇಮನಾಮ ಮಾತ್ರ ವಿಶ್ವ ಜೀವನೈಕ ಸಂಭರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೬೯॥**

ಕಲಿಯುಗದಲ್ಲಿ ಜೀವಾತ್ಮರಿಗೆ ಹರಿನಾಮ ಸಂಕೀರ್ತನವು ಅತ್ಯುನ್ನತ ಪ್ರಯೋಜನವನ್ನು ನೀಡುವಂಥದ್ದಾಗಿದೆ ಎಂದು ಅವನು ಅತ್ಯಂತ ಹರ್ಷದಿಂದ ತನ್ನ ಆತ್ಮೀಯ ಸಂಗಾತಿಗಳಾದ ಶ್ರೀ ಸ್ವರೂಪ ದಾಮೋದರ ಮತ್ತು ಶ್ರೀ ರಾಮಾನಂದ ರಾಯರಿಗೆ ಹೇಳಿದನು. ಅತ್ಯಂತ ಪ್ರಸಿದ್ಧವಾದ ಅವನ ಶಿಕ್ಷಾಷ್ಟಕದಲ್ಲಿ ಅವನು ಹರಿನಾಮ ಸಂಕೀರ್ತನೆಗೆ ಎಲ್ಲಕ್ಕಿಂತಲೂ ಮಿಗಿಲಾದ ಅತ್ಯುನ್ನತ

ಸ್ಥಾನವನ್ನು ನೀಡಿ ಭಕ್ತಿಯಿಂದ ಶ್ರೀಕೃಷ್ಣನ ದಿವ್ಯನಾಮಗಳನ್ನು ಜಪಿಸುವುದು ಈ ಲೋಕದ ಪ್ರತಿಯೊಬ್ಬ ಜೀವಾತ್ಮನ ಬದುಕಿಗೆ ಏಕೈಕ ಪೋಷಣೆಯಾಗಿರುತ್ತದೆ ಮತ್ತು ಅವರ ಬದುಕಿನ ಆಧಾರವಾಗಿರುತ್ತದೆ ಎಂದು ನಿರ್ಣಯಾತ್ಮಕವಾಗಿ ಬೋಧಿಸಿದನು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

## ಶ್ಲೋಕ ೨೦

**ಪ್ರೇಮಹೇಮದೇವ ದೇಹಿ ದಾಸರೇಶಮಾನ್ಯತಾಮ್**
**ಕ್ಷಮ್ಯತಾಮ್ ಮಹಾಪರಾಧ ರಾಶಿರೇಶ ಗಣ್ಯತಾಮ್ ।**
**ರೂಪಕಿಂಕರೇಷು ರಾಮಾನಂದದಾಸ ಸಂಭರಮ್**
**ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥೨೦॥**

ಓ ನನ್ನ ಹೊಂಬಣ್ಣದ ದೇವನೇ ! ಪ್ರೇಮದ ಮಹಾಸಾಗರವೇ ! ನಿನ್ನ ಪ್ರೇಮನಿಧಿಯನ್ನು ನನಗೆ ಅನುಗ್ರಹಿಸು. ಈ ಪತಿತನ ಅಸಂಖ್ಯಾತ ಅಪರಾಧಗಳನ್ನು ಕ್ಷಮಿಸಿ ನನ್ನೆಡೆಗೆ ಸ್ವಲ್ಪ ಗಮನವನ್ನು ನೀಡು. ಇವನನ್ನು ಶ್ರೀ ರೂಪಗೋಸ್ವಾಮಿಯವರ ಅತ್ಯಂತ ಆತ್ಮೀಯ ಹಾಗೂ ನಿಕಟ ಸೇವಕನಂತೆ ನೋಡು. ಓ ಮಹಾಪ್ರಭು ! ನೀನೊಬ್ಬನೇ ರಾಮಾನಂದದಾಸನ ಭಾಗ್ಯದ ಏಕೈಕ ದಾತ ಮತ್ತು ಸಂರಕ್ಷಕನಾಗಿರುವೆ. ದಿವ್ಯಪ್ರೇಮದ ಹೊಂಬಣ್ಣದ ನನ್ನ ದೇವನೇ! ಸೌಂದರ್ಯಮೂರ್ತಿ ಗೌರಸುಂದರನೇ ! ನಿನಗೆ ಜಯವಾಗಲಿ ! ನಾನು ಎಂದೆಂದಿಗೂ ಕೊನೆಯಿಲ್ಲದ ನಿನ್ನ ಮಹಿಮೆಗಳನ್ನು ಹಾಡಿ ಹೊಗಳುತ್ತೇನೆ.

## ಶ್ಲೋಕ ೨೧

**ಸಶ್ರದ್ಧದಃ ಸಪ್ತದಶಕಮ್ ಪ್ರೇಮಧಾಮೇತಿ ನಾಮಕಮ್ ।**
**ಸ್ತವಮ್ ಕೋಪಿ ಪಠನ್ ಗೌರಮ್ ರಾಧಾಶ್ಯಾಮಮಯಂ ವ್ರಜೇತ್ ॥೨೧॥**

ಪ್ರೇಮಧಾಮಸ್ತೋತ್ರವೆಂಬ ಹೆಸರಿನ ಈ ಎಪ್ಪತ್ತು ಶ್ಲೋಕಗಳನ್ನು ಆದರದಿಂದ, ಶ್ರದ್ಧೆಯಿಂದ ಮತ್ತು ಭಕ್ತಿಯಿಂದ ಹಾಡಿ, ಓದಿ, ಅಭ್ಯಾಸ ಮಾಡುವವರು ಶ್ರೀಮತಿ ರಾಧಾರಾಣಿಯ ಭಾವ ಮತ್ತು ಕಾಂತಿಯಿಂದ ದೇದೀಪ್ಯಮಾನನಾಗಿರುವ ಸ್ವಯಂ ಶ್ಯಾಮಸುಂದರ ಶ್ರೀ ಗೌರಸುಂದರನ ಪ್ರೇಮಪೂರ್ವಕ ಭಕ್ತಿಸೇವೆಯ ಅವಕಾಶವನ್ನು ಗಳಿಸುತ್ತಾರೆ.

## ಶ್ಲೋಕ ೨೨

**ಪಂಚಮೆ ಶತ ಗೌರಾಬ್ದೆ ಶ್ರೀಸಿದ್ಧಾಂತಸರಸ್ವತೀ ।**
**ಶ್ರೀಧರಃ ಕೋಪಿ ತಚ್ಛಿಷ್ಯಸ್ತ್ರಿದಂಡೀ ನೌತಿ ಸುಂದರಮ್ ॥೨೨॥**

ಐದು ನೂರನೇ ಗೌರಾಬ್ದದಲ್ಲಿ ಶ್ರೀ ಸಿದ್ಧಾಂತ ಸರಸ್ವತಿಯವರ ತ್ರಿದಂಡಿ ಶಿಷ್ಯನಾದ ಶ್ರೀಧರ ಎಂಬ ನಾಮಾಂಕಿತನಿಂದ ಈ ಸ್ತೋತ್ರವು ವಿರಚಿತವಾಗಿರುತ್ತದೆ.



ಪ್ರೇಮರಂಗಪಾಠಭಂಗ ಛಾತ್ರಕಾಕುಕಾತರಮ್
ಛಾತ್ರಸಂಗ ಹಸ್ತತಾಲ ಕೀರ್ತನಾದ್ಯ ಸಂಚರಮ್ ।
ಕೃಷ್ಣನಾಮ ಸೀಧುಸಿಂಧು ಮಗ್ನ ದಿಕ್ಚರಾಚರಮ್
ಪ್ರೇಮಧಾಮದೇವಮೇವ ನೌಮಿ ಗೌರಸುಂದರಮ್ ॥

ಅಂತರಂಗದೊಳಗಿನ ದಿವ್ಯಪ್ರೇಮದ ಹೆಚ್ಚಳದಿಂದಾಗಿ, ತನ್ನ ವಿದ್ವತ್ಪೂರ್ಣ ಧ್ಯೇಯೋದ್ದೇಶಗಳನ್ನು ಮಹಾಪ್ರಭುವು ಮುಂದುವರಿಸಲಾಗದೇ ಮಿತಿಮೀರಿದ ಪ್ರೇಮಾನಂದದಿಂದ ತನ್ನ ವಿದ್ಯಾರ್ಥಿಗಳ ಜೊತೆಯಲ್ಲಿ ಶ್ರೀಕೃಷ್ಣನ ದಿವ್ಯನಾಮಗಳ ಕೀರ್ತನೆಗಳನ್ನು ಹಾಡಲು ಪ್ರಾರಂಭಿಸಿದನು. ಅವನ ವಿದ್ಯಾರ್ಥಿಗಳೆಲ್ಲರೂ, ಕೈಚಪ್ಪಾಳೆ ತಟ್ಟುತ್ತಾ, ನರ್ತಿಸುತ್ತಾ ಅವನೊಡನೆ ಶ್ರೀಕೃಷ್ಣಸಂಕೀರ್ತನೆಯಲ್ಲಿ ಸೇರಿಕೊಂಡರು. ಇದು ಅವನ ಸಂಕೀರ್ತನ ಆಂದೋಳನದ ಶುಭಾರಂಭವಾಗಿತ್ತು. ತರುವಾಯ ಜಗತ್ತಿನ ಎಲ್ಲಾ ದಿಕ್ಕುಗಳೂ ಶ್ರೀಕೃಷ್ಣನ ದಿವ್ಯನಾಮಗಳ ಕೀರ್ತನೆಯ ಪರಮಾನಂದದಿಂದ ಹರಿದ ಅಮೃತಸಾಗರದಲ್ಲಿ ಮುಳುಗಿಹೋದವು. ಶುದ್ಧಪ್ರೇಮದ ಏಕೈಕ ದಿವ್ಯಧಾಮವಾದ ನನ್ನ ಇಷ್ಟದೇವ ಹೊಂಬಣ್ಣದ ಗೌರಸುಂದರನ ಎಣೆಯಿಲ್ಲದ ಮಹಿಮೆಗಳನ್ನು ನಾನು ಆನಂದದಿಂದ ಹಾಡಿಹೊಗಳುತ್ತೇನೆ.

